ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಿ. ನರೇಂದರ್

ಜಿ. ಅಶೋಕ್ ಕುಮಾರ್-ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು

ರಿಟ್ ಅರ್ಜಿ ಸಂಖ್ಯೆ: 33296/2019 (ಎಸ್-ಟಿಆರ್), ದಿನಾಂಕ 21 ನೇ ಅಕ್ಟೋಬರ್, 2019.

ಆಜ್ಞೆ

ನ್ಯಾಯಮೂರ್ತಿ ಶ್ರೀ ಜಿ. ನರೇಂದರ್:

ಅರ್ಜಿದಾರರ ಪರ ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ಎಂ. ನಾಗಪ್ರಸನ್ನ, 1 ನೇ ಪ್ರತಿವಾದಿ ಪರ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು, 2 ನೇ ಮತ್ತು 4 ನೇ ಪ್ರತಿವಾದಿಗಳ ಪರ ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ಎಸ್.ಎಸ್. ನಾಗಾನಂದ ಹಾಗೂ ಮೂರನೇ ಪ್ರತಿವಾದಿ ಪರ ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ವಿ. ಲಕ್ಷ್ಮೀನಾರಾಯಣ ಇವರ ವಾದಗಳನ್ನು ಆಲಿಸಲಾಗಿದೆ.

2. ಅರ್ಜಿದಾರರು, ನಾಲ್ಕನೇ ಪ್ರತಿವಾದಿ ನಿಗಮದ ಮಂಡಳಿಯಲ್ಲಿ ತನ್ನ ಸ್ಥಾನಕ್ಕೆ ನಾಮನಿರ್ದೇಶಿತ ನಿರ್ದೇಶಕರಾಗಿ (ತಾಂತ್ರಿಕ) ಮೂರನೇ ಪ್ರತಿವಾದಿಯನ್ನು ನೇಮಕಾತಿ ಮಾಡಿದ್ದರಿಂದ ಮತ್ತು ತತ್ಪರಿಣಾಮವಾಗಿ, ದಿನಾಂಕ: 22.07.2019 ರ ಪ್ರಶ್ನಿತ ಆದೇಶದ ಮೇರೆಗೆ ಕರ್ನಾಟಕ ವಿದ್ಯುತ್ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಾಗಿ ತಮ್ಮನ್ನು ನೇಮಕ ಮಾಡಿದ್ದರಿಂದ ಬಾಧಿತರಾಗಿ ಈ ನ್ಯಾಯಾಲಯವನ್ನು ಸಂಪರ್ಕಿಸಿದ್ದಾರೆ. ನಾಮನಿರ್ದೇಶನದ ಈ ಕ್ರಮಕ್ಕೆ ವರ್ಗಾವಣೆ ಮತ್ತು-ನಾಮನಿರ್ದೇಶನ ಎಂದು ಹೆಸರಿಸಲಾಗಿದೆ (ಅನುಬಂಧ-ಹೆಚ್).

ಮೊಕದ್ದಮೆಯ ಸಂಗತಿಗಳು:

3. ಅರ್ಜಿದಾರರ ಮೊಕದ್ದಮೆಯೆಂದರೆ, ಸಹಾಯಕ ಅಭಿಯಂತರರಾಗಿ ದಿನಾಂಕ: 05.04.1984 ರಂದು ಎರಡನೇ ಪ್ರತಿವಾದಿಯ ಸೇವೆಗಳನ್ನು ಸೇರಿಕೊಂಡು, ತರುವಾಯದಲ್ಲಿ ದಿನಾಂಕ: 29.11.1999 ರಂದು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರ ವೃಂದಕ್ಕೆ ಮತ್ತು ದಿನಾಂಕ: 22.08.2007 ರಿಂದ ಜಾರಿಯಾಗುವಂತೆ ಕಾರ್ಯನಿರ್ವಾಹಕ ಅಭಿಯಂತರ ವೃಂದಕ್ಕೆ; ಆ ತರುವಾಯ, ದಿನಾಂಕ: 30.04.2016 ರಿಂದ ಜಾರಿಗೆ ಬರುವಂತೆ ಸೂಪರಿಂಟೆಂಡಿಂಗ್ ಇಂಜಿನಿಯರ್ ವೃಂದಕ್ಕೆ ಪದೋನ್ನತಿ ಹೊಂದಿದ್ದರು. ಬಿ.ಕೆ. ಪವಿತ್ರ ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ಚ ನ್ಯಾಯಾಲಯವು ನೀಡಿದ ತೀರ್ಪಿನ ಕಾರಣದಿಂದ, ಕೆಲವು ಅಭ್ಯರ್ಥಿಗಳ ಬಡ್ತಿಗಳನ್ನು ಮರುಪರಿಶೀಲಿಸುವುದು ಅಗತ್ಯವಾಗಿತ್ತು ಮತ್ತು ತತ್ಪರಿಣಾಮವಾಗಿ ಅವರಿಗೆ ನೀಡಲಾದ ಬಡ್ತಿಗಳನ್ನು ಹಿಂಪಡೆಯಲಾಗಿತ್ತು ಹಾಗೂ ಅವರನ್ನು ಕೆಳಗಿನ ವೃಂದಕ್ಕೆ ಪದಾವನತಿಗೊಳಿಸಲಾಯಿತು ಮತ್ತು ಮೂರನೇ ಪ್ರತಿವಾದಿಯು ಅಂಥ ಒಬ್ಬ ಅಭ್ಯರ್ಥಿಯಾಗಿದ್ದರು. ಹಿಂಬಡ್ತಿಯ ಕಾರಣದಿಂದ ಅರ್ಜಿದಾರರನ್ನು ಜೇಷ್ಠತೆಯ ಕ್ರಮದಲ್ಲಿ ಬದಲಾಯಿಸಲಾಯಿತು ಮತ್ತು ತತ್ಪರಿಣಾಮವಾಗಿ ಅರ್ಜಿದಾರರು, ದಿನಾಂಕ: 16.04.2018 ರ ಆದೇಶದ ಮೂಲಕ ದಿನಾಂಕ: 30.06.2014 ರಿಂದ ಪರಿಣಾಮಕಾರಿಯಾಗುವಂತೆ ಮುಖ್ಯ ಅಭಿಯಂತರರಾಗಿ ಬಡ್ತಿ

ಹೊಂದಿದ್ದರು ಹಾಗೂ ಮೂರನೇ ಪ್ರತಿವಾದಿಗಳನ್ನು ಸೂಪರಿಂಟೆಂಡೆಂಟ್ ಇಂಜಿನಿಯರ್ ಹುದ್ದೆಗೆ ಹಿಂದಕ್ಕೆ ತರಲಾಗಿತ್ತು. ಆ ತರುವಾಯ, ರಾಜ್ಯ ಸರ್ಕಾರವು, ಕರ್ನಾಟಕ (ರಾಜ್ಯದ ನಾಗರಿಕ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017 ಎಂದು ಕರೆಯಲಾಗುವ ವಿಶೇಷ ಅಧಿನಿಯಮಿತಿಯನ್ನು ರಚಿಸಿ ಜಾರಿಗೊಳಿಸಿತು. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಅಧಿನಿಯಮದ ಪ್ರತಿಕೂಲ ಪರಿಣಾಮವನ್ನು ಪ್ರಶ್ನಿಸಿ ಆಕ್ಷೇಪಣೆಗಳನ್ನು ಸಲ್ಲಿಸಲಾಯಿತು. ಸದರಿ ಅರ್ಜಿಗಳನ್ನು ವಜಾ ಮಾಡಿ 2018 ರ ಅಧಿನಿಯಮದ ಸಿಂಧುತ್ವವನ್ನು ಎತ್ತಿಹಿಡಿಯಲಾಯಿತು. ತತ್ಪರಿಣಾಮವಾಗಿ ಮತ್ತೊಂದು ಸುತ್ತಿನ ಡೋಲಾಯಮಾನ ಸ್ಥಿತಿ ಉದ್ಭವಿಸಿತು. ತತ್ಪರಿಣಾಮವಾಗಿ, ಕೆಳಗಿನ ಹುದ್ದೆಗೆ ವಿಪರ್ಯಯಗೊಳಿಸಿದ್ದ ಮತ್ತು ಹಿಂಬಡ್ತಿಗೊಳಿಸಿದ್ದ ವ್ಯಕ್ತಿಗಳನ್ನು ಮತ್ತೊಮ್ಮೆ ಮೂಲ ಸೇವಾ ಹಿರಿತನಕ್ಕೆ ಪುನಃಸ್ಥಾಪಿಸಲಾಗಿತ್ತು.

4. ಅರ್ಜಿದಾರರ ಪರ ಮಾನ್ಯ ಹಿರಿಯ ನ್ಯಾಯವಾದಿಗಳು ನಿವೇದಿಸಿಕೊಂಡಿರುವುದೇನೆಂದರೆ, ಆಗಿನ ಸರ್ಕಾರವು ಅದರ ಅಧಿಕಾರಾವಧಿಯ ಕೊನೆಯ ಹಂತದಲ್ಲಿದ್ದು ಬಹುಮತವನ್ನು ಕಳೆದುಕೊಂಡಿತ್ತು ಮತ್ತು ಅಲ್ಪಮತದಲ್ಲಿ ಕಾರನಿರ್ವಹಿಸುತ್ತಿದ್ದಾಗ, ಸರ್ಕಾರವು ಬಾಹ್ಯ ಕಾರಣಗಳಿಗಾಗಿ ದೊಡ್ಡ ಪ್ರಮಾಣದ ವರ್ಗಾವಣೆಗಳನ್ನು ಮಾಡುವುದರಲ್ಲಿ ತೊಡಗಿಕೊಳ್ಳಲು ಮುಂದಾಗಿತ್ತು ಹಾಗೂ ಪ್ರಶ್ನಿತ ಆದೇಶವು ಸಹ ಅಂಥ ಒಂದು ಆದೇಶವಾಗಿದ್ದು, ಈ ಒಂದೇ ಕಾರಣದ ಮೇಲೆ ಕಳಂಕಿತವಾಗಿದೆ. ಮುಂದುವರೆಸುತ್ತಾ, ಅವರು, ಹಿಂದಿನ ಸರ್ಕಾರದ ಸ್ಥಾನದಲ್ಲಿ ಬಂದ ಹೊಸ ಸರ್ಕಾರವು, ಅಧಿಕಾರಕ್ಕೆ ಬಂದ ಕೂಡಲೇ, ಹಿಂದಿನ ಸರ್ಕಾರವು ನೀಡಿದ ಆದೇಶಗಳನ್ನು ಮತ್ತು ನಿರ್ದೇಶನಗಳನ್ನು ಅನುಷ್ಠಾನಗೊಳಿಸಿರದಿದ್ದರೆ, ಅವುಗಳನ್ನು ಜಾರಿಗೆ ತರದಿರುವಂತೆ ಎಲ್ಲಾ ಇಲಾಖೆಗಳನ್ನು ನಿರ್ದೇಶಿಸಿ " ಟಿಪ್ಪಣಿ " ಹೊರಡಿಸಿತು. ದಿನಾಂಕ: 26.07.2019 ರ ಸದರಿ ಟಿಪ್ಪಣಿಯ ಪ್ರತಿಯನ್ನು ದಿನಾಂಕ: 13.09.2019 ರ ಜ್ಞಾಪನಪತ್ರ ಸಹಿತ ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಮಂಡಿಸಲಾಗಿದೆ ಎ ಂ ದು ನಿವೇದಿಸಿಕೊಂಡಿದ್ದಾರೆ. ಇದರ ಹಿನ್ನೆಲೆಯಲ್ಲಿ, ಮೂರನೇ ಪ್ರತಿವಾದಿಯನ್ನು ನಿರ್ದೇಶಕರನ್ನಾಗಿ ನೇಮಕ ಮಾಡಿ ನಾಲ್ಕನೇ ಪ್ರತಿವಾದಿ ಮಂಡಳಿಯು ಯಾವುದೇ ಗೊತ್ತುವಳಿಯನ್ನು ಅಂಗೀಕರಿಸಿರುವುದಿಲ್ಲವಾದ್ದರಿಂದ, ಮೂರನೇ ಪ್ರತಿವಾದಿಯು ಪ್ರಭಾರ ವಹಿಸಿಕೊಳ್ಳಲಾಗಲಿಲ್ಲವೆಂದು; ಆದರೆ, ಅವರು, ನಿರ್ದೇಶಕನನ್ನು ನಿರ್ದೇಶಕರನ್ನು ನಾಮನಿರ್ದೇಶನ ಮಾಡುವ ಸರ್ಕಾರದ ಅಧಿಕಾರವನ್ನು ಹಾಗೂ ಸಂಘದ-4 ನೇ ಪ್ರತಿವಾದಿ ಕಂಪನಿಯ ನಿಯಮಾವಳಿಗಳ 74 ನೇ ಅನುಚ್ಛೇದದ ನಿಬಂಧನೆಗನುಸಾರವಾಗಿ ತೆಗೆದುಹಾಕುವ ಸಂವಾದಿ ಹಕ್ಕನ್ನು ಅವರು ಯುಕ್ತವಾಗಿ ಒಪ್ಪಿಕೊಳ್ಳುತ್ತಾರೆ ಎಂದು ವಾದಿಸಿದ್ದಾರೆ.

5. ಇದಲ್ಲದೆ ಅವರು, ನೇಮಕಾತಿಗಳು ಮತ್ತು ವಜಾಗೊಳಿಸುವಿಕೆಯು ಸರ್ಕಾರದ ಹಿತದೃಷ್ಟಿಯಿಂದ ಆದರೆ ಸಂತೋಷ. ಆದರೆ ಅದನ್ನು ಅನಿಯಂತ್ರಿತ ರೀತಿಯಲ್ಲಿ ಚಲಾಯಿಸಲಾಗುವುದಿಲ್ಲ. ಮೂರನೇ ಪ್ರತಿವಾದಿಯ ಮುಂಚಿನ ಸ್ಥಾನದ ಹಿಂಬಡ್ತಿಯ ದೃಷ್ಟಿಯಿಂದ ನಿರ್ದೇಶಕರಾಗಿ ನಾಮನಿರ್ದೇಶಿತರಾಗಲು ಅವರು ಅರ್ಹರಾಗಿರಲಿಲ್ಲವೆಂದು ಬಿಂಬಿಸುವ ಪ್ರಯತ್ನ

ಮಾಡಲಾಗಿದೆಯಾದರೂ, ಮಾನ್ಯ ಹಿರಿಯ ನ್ಯಾಯವಾದಿಗಳು, 2018 ರ ಅಧಿನಿಯಮದ ಹಿನ್ನೆಲೆಯಲ್ಲಿ ವಾದವನ್ನು ಮಂಡಿಸಿರುವುದಿಲ್ಲ. ಆದರೆ ಅವರು, ಮತ್ತು ಮೂರನೇ ಪ್ರತಿವಾದಿಯನ್ನು ನಾಮನಿರ್ದೇಶನ ಮಾಡಲು ಮತ್ತು ನೇಮಕ ಮಾಡಲು ಸರ್ಕಾರವು ಅವಲಂಬಿತರಾಗಿರುವ ಜೇಷ್ಠತಾ ಪಟ್ಟಿಯು ತಾತ್ಕಾಲಿಕ ಜೇಷ್ಠತಾ ಪಟ್ಟಿಯಾಗಿದೆ ಮತ್ತು ಅದರಿಂದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನವಲಂಬಿಸಿರುವುದು ಅನುಚಿತವಾಗಿದೆ ಎಂಬುದಾಗಿ ವಾದಿಸಿದ್ದಾರೆ.

6. ತಡೆ ಅರ್ಜಿಯನ್ನು (ಕೇವಿಯಟ್) ಸಲ್ಲಿಸಿದ್ದ ಮೂರನೇ ಪ್ರತಿವಾದಿಯು, ರಿಟ್ ಅರ್ಜಿಯನ್ನು ಖಡಾಖಂಡಿತವಾಗಿ ವಿರೋಧಿಸಿದ್ದಾರೆ. ಆಕ್ಷೇಪಣೆಗಳ ಹೇಳಿಕೆಯನ್ನು ದಿನಾಂಕ: 28.08.2019 ರಂದು ಸಲ್ಲಿಸಲಾಗಿದೆ.

7. ಮೂರನೇ ಪ್ರತಿವಾದಿ ಪರ ಹಾಜರಾಗಿರುವ ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ವಿ. ಲಕ್ಷ್ಮೀನಾರಾಯಣರವರು, ದಿನಾಂಕ: 23.07.2019 ರಂದು, ಮೂರನೇ ಪ್ರತಿವಾದಿಗೆ ನಿರ್ದೇಶಕರ (ತಾಂತ್ರಿಕ) ಹುದ್ದೆಯ ಪ್ರಭಾರವನ್ನು ಹಸ್ತಾಂತರಿಸಿದಂಥ ಮುಖ್ಯ ಸಂಗತಿಗಳನ್ನು ಹಾಗೂ ಕರ್ನಾಟಕ ವಿದ್ಯುತ್ ಕಾರ್ಖಾನೆಯ ಹುದ್ದೆಯ ಪ್ರಭಾರ ವಹಿಸಿಕೊಂಡ ಸಂಗತಿಯನ್ನು ಅರ್ಜಿದಾರರು ಬಹಿರಂಗಪಡಿಸದೆ ಇರುವುದರಿಂದ, ಸಂಗತಿಗಳನ್ನು ಮರೆಮಾಚಿದ ಏಕೈಕ ಕಾರಣದ ಮೇಲೆಯೇ ರಿಟ್ ಅರ್ಜಿಯು ವಜಾಮಾಡಲು ಅರ್ಹವಾಗಿದೆ ಎಂದು ವಾದಿಸಿರುವರು. ಇದಲ್ಲದೆ ಅವರು, ಅರ್ಜಿದಾರರು ಮುಖ್ಯ ಅಭಿಯಂತರರ ಹುದ್ದೆ ಧಾರಣ ಮಾಡಲು ಮತ್ತು ಹುದ್ದೆ ಧಾರಣ ಮಾಡಲು ಅರ್ಹನಾಗಿರದ ವ್ಯಕ್ತಿಯು ಮೂರನೇ ಪ್ರತಿವಾದಿಯ ನೇಮಕಾತಿಯ ಆದೇಶವನ್ನು ಪ್ರಶ್ನಿಸಲು ಅರ್ಹರಾಗಿಯೇ ಇಲ್ಲ, ಸದರಿ ಅರ್ಜಿಯನ್ನು ಪುರಸ್ಕರಿಸಿದರೆ, 4 ನೇ ಪ್ರತಿವಾದಿಯ ಹಿತಾಸಕ್ತಿಗೆ ಹಾನಿಯನ್ನುಂಟಾಗುತ್ತದೆ. ತತ್ಪರಿಣಾಮವಾಗಿ ಸಾರ್ವಜನಿಕ ಹಾನಿಗೆ ಕಾರಣವಾಗುತ್ತದೆ.

8. ನಾಲ್ಕನೇ ಪ್ರತಿವಾದಿಯು, ದಿನಾಂಕ: 30.04.2002 ರಂದು ಕಂಪನಿಗಳ ಅಧಿನಿಯಮದ ಅಡಿಯಲ್ಲಿ ನಿಗಮಿತಗೊಂಡ ಸ್ವತಂತ್ರ ಕಾನೂನುಬದ್ಧ ಸಂಸ್ಥೆಯಾಗಿದೆ ಎಂದು ಮಾನ್ಯ ಹಿರಿಯ ನ್ಯಾಯವಾದಿಗಳು ಯುಕ್ತವಾಗಿಯೇ ನಿವೇದಿಸಿಕೊಂಡಿದ್ದಾರೆ. ಅಲ್ಲದೆ ಅವರು, ಮೂರನೇ ಪ್ರತಿವಾದಿಗೆ ದಿನಾಂಕ: 05.02.1992 ರಂದು ಎಇಇ ಆಗಿ ಬಡ್ತಿ ನೀಡಿದ್ದರೆ, ಅರ್ಜಿದಾರರಿಗೆ ದಿನಾಂಕ: 29.01.1999 ರಂದು ಸದರಿ ಹುದ್ದೆಗೆ ಬಡ್ತಿ ನೀಡಲಾಗಿತ್ತು ಮತ್ತು ಮೂರನೇ ಪ್ರತಿವಾದಿಯ ಸೇವಾ ಹಿರಿತನವು, ಅಜಿತ್ ಸಿಂಗ್ (1999) 7 ಎಸ್‌ಸಿಸಿ 209 ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ನಿಯಮದ ಕಾರಣದಿಂದ ಸಂರಕ್ಷಿತವಾಗಿದೆ; ಅರ್ಜಿದಾರರ ಮುಂಬಡ್ತಿಯು, ಸರ್ಕಾರಗಳ ನಿರಂತರತೆಯಲ್ಲಿ ವಿವಿಧ ಸರ್ಕಾರಿ ಆದೇಶಗಳ ಮತ್ತು ದಿನಾಂಕ: 27.04.1978 ರ ಮೀಸಲಾತಿ ನೀತಿಯ ಕಾರಣದಿಂದ ಆಗಿದೆ ಎಂದು ವಾದಿಸಿದ್ದಾರೆ. ಇದಲ್ಲದೆ ಅವರು, 2018 ರ ಅಧಿನಿಯಮದ ಹಿನ್ನೆಲೆಯಲ್ಲಿ, ಸ್ಥಾನ ಹಿಂಬಡ್ತಿಯ ಕಾರಣದಿಂದ ಮೂರನೇ ಪ್ರತಿವಾದಿಯ ಅಲ್ಪಕಾಲಿಕ ಸ್ಥಾನಾಂತರವು ಯಾವುದೇ ಪರಿಣಾಮದಿಂದಾಗಿಲ್ಲ ಎಂದು ವಾದಿಸಿದ್ದಾರೆ. ಅವರು, ದಿನಾಂಕ: 23.07.2019 ರ ವ್ಯವಹರಣೆಗಳಿಗೆ ನ್ಯಾಯಾಲಯದ ಗಮನವನ್ನು ಸೆಳೆದು, ಅರ್ಜಿದಾರರು ಪ್ರಭಾರ ವಹಿಸಿಕೊಟ್ಟಿದ್ದ ಕಾರಣದಿಂದ,

ಪ್ರಸ್ತುತ ರಿಟ್ ಅರ್ಜಿಯನ್ನು ಸಮರ್ಥಿಸಲು ಹಕ್ಕುಳ್ಳವರಾಗುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ. ಇದಲ್ಲದೆ ಅವರು, ಇದು, ಇಷ್ಟಪರಂತ ತತ್ವದ ಸಿದ್ಧಾಂತವನ್ನು ಅನ್ವಯಿಸಿದ ಮೊಕದ್ದಮೆ ಮಾತ್ರವಾಗಿದೆ ಮತ್ತು ಅದು ಒಪ್ಪಿಕೊಂಡ ನಿಲುವಾಗಿದ್ದರೆ,ಯಾವುದೇ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಲಿ ಅಥವಾ ಸಹಜ ನ್ಯಾಯ ತತ್ವಗಳ ಉಲ್ಲಂಘನೆಯಾಗಲಿ ಆಗಿಲ್ಲದೆ ಇರುವುದರಿಂದ, ಪ್ರಶ್ನಿತ ಆದೇಶವನ್ನು ನ್ಯಾಯಿಕ ಮರುಪರಿಶೀಲನೆಗೆ ಒಳಪಡಿಸಲಾಗುವುದಿಲ್ಲ ಎಂದು ವಾದಿಸಿದ್ದಾರೆ. ಅವರು ತಮ್ಮ ವಾದವನ್ನು ಮುಂದುವರೆಸಿ, ಅರ್ಜಿದಾರರನ್ನು ನಿರ್ದೇಶಕರ ಹುದ್ದೆಗೆ ನಾಮನಿರ್ದೇಶಿಸುವಾಗ ಮತ್ತು ನೇಮಕ ಮಾಡುವಾಗ ಅಳವಡಿಸಿಕೊಂಡಿದ್ದಂಥಹುದೇ D ಪಕ್ರಿಯೆಯನ್ನನುಸರಿಸಿ, ಮೂರನೇ ಪ್ರತಿವಾದಿಯನ್ನು ಸಹ ನೇಮಕ ಮಾಡಿಕೊಳ್ಳಲಾಗಿದೆ ಮತ್ತು ಅದು ನಾಲ್ಕನೇ ಪ್ರತಿವಾದಿ ಕಂಪನಿಯು ಅಳವಡಿಸಿಕೊಂಡ ವಿಧಾನವಾಗಿದೆ; ನಾಲ್ಕನೇ ಪ್ರತಿವಾದಿ ಮಂಡಳಿಯ ನಿರ್ದೇಶಕರುಗಳನ್ನಾಗಿ, ಅರ್ಜಿದಾರರನ್ನು ಮತ್ತು ಮೂರನೇ ಪ್ರತಿವಾದಿಯನ್ನು ನಾಮನಿರ್ದೇಶಿಸಿದ ಹಾಗೂ ನೇಮಕ ಮಾಡಿದ ವ್ಯವಹರಣೆಗಳು/ಆದೇಶಗಳು ಯಾವುದೇ ನಿರ್ದಿಷ್ಟ ಅವಧಿಗಾಗಿರಲಿಲ್ಲ ಮತ್ತು ಇದು ಸರ್ಕಾರದ ಮುಂದಿನ ಆದೇಶಗಳವರೆಗೆ ಆಗಿತ್ತು ಎಂದು ವಾದಿಸಿದ್ದಾರೆ. ಇದು ಒಪ್ಪಿಕೊಂಡ ನಿಲುವಾಗಿರುವಲ್ಲಿ, ಯಾವುದೇ ಸಮಯದಲ್ಲೂ ನಾಮನಿರ್ದೇಶನವನ್ನು ಮತ್ತು ನೇಮಕಾತಿಯನ್ನು ಹಿಂಪಡೆಯುವುದು ಅಥವಾ ಮರುಪರಿಶೀಲಿಸುವುದು ಸರ್ಕಾರಕ್ಕೆ ಬಿಟ್ಟ ವಿಷಯವಾಗಿದೆ ಮತ್ತು ಅದಕ್ಕಾಗಿ ಯಾವುದೇ ಕಾರಣಗಳನ್ನು ನೀಡಬೇಕಾದ ಅಗತ್ಯವಿಲ್ಲವೆಂದು ಅವರು ವಾದಿಸಿದ್ದಾರೆ. ಅವರು, ಇಂಥ ಸ್ವರೂಪದ ಆದೇಶಗಳನ್ನು ಹೊರಡಿಸಲು, ಕಾರ್ಯನಿರ್ವಹಣಾ ನಿಯಮಗಳು (ಟಿಬಿಆರ್) ಮುಖ್ಯ ಮಂತ್ರಿಗೆ ಅಧಿಕಾರ ನೀಡುತ್ತವೆ ಎಂದು ವಾದಿಸಲು, ಎಐಆರ್ 1963 ಎಸ್ಸಿ 395 (ಕಂಡಿಕೆ 12 ಮತ್ತು 13) ರಲ್ಲಿ ವರದಿಯಾದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯಗಳನ್ನು ಅವಲಂಬಿಸಿದ್ದಾರೆ.

9. ಮಾನ್ಯ ಹಿರಿಯ ನ್ಯಾಯವಾದಿಗಳು, ದಿನಾಂಕ: 22.10.2018 ರ ಆದೇಶದ ಮೂಲಕ ವಜಾಗೊಳಿಸಬೇಕಾಗಿರುವ ರಿಟ್ ಅರ್ಜಿ ಸಂಖ್ಯೆ: 24368/2018 ರಲ್ಲಿನ ರಿಟ್ ಅರ್ಜಿಗಳ ಮತ್ತು ಇತರ ತತ್ಸಂಬಂಧಿ ರಿಟ್ ಅರ್ಜಿಗಳ ಗುಂಪಿನಲ್ಲಿ ಸಮನ್ವಯ ಪೀಠವು ಹೊರಡಿಸಿದ ಆದೇಶವನ್ನು ಅವಲಂಬಿಸಿದ್ದಾರೆ ಮತ್ತು 13 ನೇ ಕಂಡಿಕೆ ಕಡೆಗೆ ನ್ಯಾಯಾಲಯದ ಗಮನವನ್ನು ಸೆಳೆದಿದ್ದಾರೆ ಹಾಗೂ ತಮ್ಮ ವಾದವನ್ನು ಮುಂದುವರೆಸಿ, " duranate beneplacito " ಎಂದರೆ ಇಷ್ಟಪದ್ಯಂತ ಎಂಬ ಲ್ಯಾಟಿನ್ ಪದದಿಂದ ಈ ತತ್ವವು ಉದ್ಭವಿಸಿದೆ ಎಂದು ನಿವೇದಿಸಿಕೊಂಡಿದ್ದಾರೆ ಮತ್ತು ನಾಮನಿರ್ದೇಶನಗೊಂಡ ವ್ಯಕ್ತಿಯು, ಪ್ರಾಧಿಕಾರದ ಇಷ್ಟಪರಂತ ಮಾತ್ರವೇ ಪದ ಧಾರಣ ಮಾಡುತ್ತಾನೆ ಎಂದು ವಾದಿಸಿರುವರು. ಇಷ್ಟಪರಂತ ತತ್ವದ ಸಮರ್ಥನೆಗಾಗಿ ಅವರು ಹಲವಾರು ತೀರ್ಪುಗಳನ್ನು ಅವಲಂಬಿಸಿರುವರು. ಅವರು, ಧಾನೇಶ್ವರಿ ಠಾಕೂರ್-ವಿರುದ್ಧ ಹಿಮಾಚಲ್ ಪ್ರದೇಶ ರಾಜ್ಯ2014 ಎಸ್‌ಸಿಸಿ ಆನ್‌ಲೈನ್ ಹೆಚ್ಚಪಿ 2790 ಮೊಕದ್ದಮೆಯಲ್ಲಿ ನೀಡಿದ ತೀರ್ಪಿನ ಕಡೆ ನ್ಯಾಯಾಲಯದ ಗಮನ ಸೆಳೆದಿದ್ದಾರೆ. ಈ ನ್ಯಾಯಾಲಯದ ಅಭಿಪ್ರಾಯದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮತ್ತು ಈ ನ್ಯಾಯಾಲಯವು ವಿಧಿಸಿದ ನಿಯಮದ ಪ್ರತಿಪಾದನೆಗೆ ಯಾವುದೇ ವಿರೋಧವಿರದಿರಬಹುದು.

10. ಮಾನ್ಯ ಹಿರಿಯ ನ್ಯಾಯವಾದಿಗಳು, ಅರ್ಜಿದಾರರ ಪರವಾಗಿ ಮಂಡಿಸಿದ ಎಲ್ಲಾ ವಾದಗಳನ್ನು ಅವಲೋಕಿಸಲಾಗಿ, ಎಲ್ಲಿಯೂ ದುರ್ಭಾವನೆಯ ಯಾವುದೇ ಆರೋಪವನ್ನು ನಿರೂಪಿಸಿರುವುದಿಲ್ಲ ಹಾಗೂ ಅರ್ಜಿದಾರರು ಯಾವುದೇ " ದುರುದ್ದೇಶವನ್ನು 11 ವ್ಯಕ್ತಪಡಿಸಿಲ್ಲವಾದ್ದರಿಂದ, ರಿಟ್ ಅರ್ಜಿಯನ್ನು ಸಮರ್ಥಿಸುವ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲವೆಂದು ವಾದಿಸಿದ್ದಾರೆ. ಅವರು, ಅರ್ಜಿದಾರರ ಸೇವೆಯನ್ನು ಕೊನೆಗೊಳಿಸದೆ ಇರುವುದರಿಂದ ಮತ್ತು ಅವರು ಬಾಧಿತ ವ್ಯಕ್ತಿಯಾಗದೆ ಇರುವುದರಿಂದ, ರಿಟ್ ಅರ್ಜಿಯನ್ನು ಸಮರ್ಥಿಸುವ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ ಮತ್ತು ಅವರು ಬಾಧಿತ ವ್ಯಕ್ತಿಯಾಗದೇ ಇರುವುದರಿಂದ ರಿಟ್ ಅರ್ಜಿಯನ್ನು ಸಮರ್ಥಿಸಲಾಗುವುದಿಲ್ಲ ಹಾಗೂ ಈ ಸಂಬಂಧದಲ್ಲಿ ಅವರು 1976 1 ಎಸ್‌ಸಿ ಪುಟ 671 ರಲ್ಲಿ ವರದಿ ಮಾಡಿದ ಮಾನ್ಯ ಸರ್ವೋಚ್ಚ ಚ ನ್ಯಾಯಾಲಯದ ತೀರ್ಪುಗಳನ್ನು ಅವಲಂಬಿಸಿದ್ದಾರೆ ಎಂದು ವಾದಿಸಿದ್ದಾರೆ. ಅವರು ತಮ್ಮ ವಾದವನ್ನು ಮುಂದುವರಿಸಿ, ಕಾನೂನುರೀತ್ಯಾ ಜಾರಿಗೊಳಿಸಬಹುದಾದ ಯಾವುದೇ ಹಕ್ಕನ್ನು ಅರ್ಜಿದಾರರು ಹೊಂದಿರದೆ ಇರುವುದರಿಂದ, 4 ನೇ ಪ್ರತಿವಾದಿಯ ಮಂಡಳಿಯಲ್ಲಿ ನಿರ್ದೇಶಕರ ಹುದ್ದೆಗೆ ಮೂರನೇ ಪ್ರತಿವಾದಿಯನ್ನು ನಾಮನಿರ್ದೇಶಿಸಿದ ಮತ್ತು ನೇಮಕ ಮಾಡಿದ ಆದೇಶವನ್ನು ಪ್ರಶ್ನಿಸಲಾಗುವುದಿಲ್ಲ. ಈ ಸಂಬಂಧದಲ್ಲಿ, ಅವರು ಎಐಆರ್ 1980 ಎಸ್‌ಸಿ 1255 ರಲ್ಲಿ ವರದಿ ಮಾಡಿದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದಾರೆ ಎಂದು ನಿವೇದಿಸಿಕೊಂಡಿದ್ದಾರೆ. ಇದಲ್ಲದೆ ಅವರು, ಸಂವಿಧಾನದ 226 ನೇ ಅನುಚ್ಛೇದದ ಅಡಿಯಲ್ಲಿ ನಿಹಿತವಾದ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವಾಗ ನ್ಯಾಯಾಲಯವು, ಶಾಸಕಾಂಗವು ಉಪಬಂಧಿಸಿರದ ಮತ್ತೇನನ್ನೋ ಓದುವ ಮೂಲಕ ಶಾಸಕಾಂಗದ ಉದ್ದೇಶವನ್ನು ಅಸ್ಪಷ್ಟಗೊಳಿಸಬಾರದು ಎಂದು ವಾದಿಸಿದ್ದಾರೆ. ಇದಲ್ಲದೆ ಅವರು, ಯಾವುದೇ ಸಕಾರಾತ್ಮಕ ಕ ಪರಿಹಾರವನ್ನು ನೀಡದಿದ್ದರೆ, ಆಗ, ಮೂರನೇ ಪ್ರತಿವಾದಿಯನ್ನು ಹೊರದೂಡುವ ಸಲುವಾಗಿ ನಕಾರಾತ್ಮಕ ಪರಿಹಾರ ನೀಡಲು ಅರ್ಜಿಯನ್ನು ಪುರಸ್ಕರಿಸಲಾಗುವುದಿಲ್ಲವೆಂದು ವಾದಿಸಿದ್ದಾರೆ. ಅವರು, 74 ನೇ ಅನುಚ್ಛೇದದಲ್ಲಿ, " ಅವರನ್ನು ತೆಗೆದುಹಾಕಿ, ಅವರ ಸ್ಥಾನದಲ್ಲಿ ಇನ್ನೊಬ್ಬರನ್ನು ನೇಮಕ ಮಾಡುವ ಹಕ್ಕನ್ನು ಹೊಂದಿರಕ್ಕದ್ದು ” ಎಂಬ ಪದಗಳ ಬಳಕೆಯನ್ನು ಉಲ್ಲೇಖಿಸಿದ್ದಾರೆ. ಕೊನೆಯದಾಗಿ ಅವರು, ನಿರ್ದೇಶಕ ಸ್ಥಾನದಿಂದ ತೆಗೆದುಹಾಕಿದ್ದರಿಂದ ಅರ್ಜಿದಾರರು ಬಾಧಿತರಾಗಿದ್ದರೆ, ಆಗ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ ಮುಂದೆ ಪರಿಹಾರ ಕೋರಬಹುದಾಗಿದೆ ಎಂದು ವಾದಿಸಿದ್ದಾರೆ. 152 ನೇ ಪ್ರಕರಣದ ಉಪಬಂಧಗಳು, ಅಲ್ಲದೆ 178 ನೇ ಮತ್ತು 179 ನೇ ಪ್ರಕರಣಗಳ ಉಪಬಂಧಗಳು ಸರ್ಕಾರಿ ನಿಗಮಗಳಿಗೆ ಅನ್ವಯವಾಗುವುದಿಲ್ಲವೆಂದು ವಾದಿಸಿದ್ದಾರಾದರೂ, ಸದರಿ ವಾದಗಳನ್ನು ಸಮರ್ಥಿಸಲು ಯಾವುದೇ ಸಾಕ್ಷ್ಯವನ್ನು ಮಂಡಿಸಿರುವುದಿಲ್ಲ.

11. ಮೂರನೇ ಪ್ರತಿವಾದಿ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳು, ತಮ್ಮ ವಾದಗಳ ಸಮರ್ಥನೆಗೆ ಈ ಮುಂದಿನ ತೀರ್ಪುಗಳನ್ನು ಅವಲಂಬಿಸಿದ್ದಾರೆ:

1. ಕೊಲ್ಕತ್ತಾ ಗ್ಯಾಸ್ ಕಂಪನಿ (ಪ್ರೊಪ್ರೈಟರಿ) ಅ.-ವಿರುದ್ಧ ಪಶ್ಚಿಮ ಬಂಗಾಳ ರಾಜ್ಯ ಮತ್ತು ಇತರರು1962 ಎಸ್‌ಯುಪಿಪಿ (3) ಎಸ್ ಆರ್ 1/ಎಐಆರ್ 1962 ಎಸ್ 1044

2. ಡಾ. ರಾಯ್ ಶಿವೇಂದ್ರ ಬಹದ್ದೂರ್ –ವಿರುದ್ಧ– ನಳಂದ ವಿಶ್ವವಿದ್ಯಾನಿಲಯದ ಆಡಳಿತ ಮಂಡಳ, ಬಿಹಾರ್ ಷರೀಫ್ ಮತ್ತು ಇತರರು ಎಐಆರ್ 1962 ಎಸ್‌ಸಿ 1210

3. ಸರ್ಕಾರದ ಕಾರ್ಯದರ್ಶಿ ಮತ್ತು ಇನ್ನೊಬ್ಬರು-ವಿರುದ್ಧ-ಎಂ. ಸೆಂಥಿಲ್ ಕುಮಾರ್ 2005 (3) ಎಸ್‌ಸಿಸಿ 45

4. ವಿ.ಕೆ. ಮಜೋತ್ರಾ ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು 2003 (8) ಎಸ್‌ಸಿಸಿ 40

5. ರಾಜಸ್ಥಾನ ಪ್ರದೇಶ ವೈದ್ಯ ಸಮಿತಿ, ಸರ್ದಾರ್‌ಶಹರ್ ಮತ್ತು ಇನ್ನೊಬ್ಬರು ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು 2010 (12) ಎಸ್‌ಸಿಸಿ 609

6. ನಿರ್ಮಲ್‌ಜೀತ್ ಸಿಂಗ್ ಹೂಣ್ ವಿರುದ್ಧ-ಇರ್ತಿಜಾ ಹುಸೇನ್ ಮತ್ತು ಇತರರು 2010 (14) ಎಸ್‌ಸಿಸಿ 564

7. ಖಾಲಿದ್ ಹುಸೇನ್ (ಅಪ್ರಾಪ್ತ), ಅರ್ಜಿದಾರ-ವಿರುದ್ಧ-ಆಯುಕ್ತರು ಮತ್ತು ತಮಿಳುನಾಡು ಸರ್ಕಾರದ ಕಾವ್ಯದರ್ಶಿ 9, ಆರೋಗ್ಯ ಇಲಾಖೆ, ಮದ್ರಾಸ್ ಮತ್ತು ಇತರರು ಎಐಆರ್ 1987 ಎಸ್‌ಸಿ 2074

8. ಪ್ರವಾಸಿ ಭಲಾಯಿ ಸಂಘಟನ್ ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು ಎಐಆರ್ 2014 ಎಸ್‌ಸಿ 1591

9. ಉತ್ತರ ಪ್ರದೇಶ ರಾಜ್ಯ ಮತ್ತು ಇನ್ನೊಬ್ಬರು-ವಿರುದ್ಧ-ಉತ್ತರ ಪ್ರದೇಶ ರಾಜ್ಯ ಖಾಂಜಿ ವಿಕಾಸ್ ನಿಗಮ ಸಂಘರ್ಷ ಸಮಿತಿ ಮತ್ತು ಇತರರು 2008 (12) ಎಸ್‌ಸಿಸಿ 675

10. ಶ್ರೀ ರಾಮದಾಸ್ ಮೋಟಾರ್ ಟ್ರಾನ್ಸ್‌ಪೋರ್ಟ್ ಅಮಿಟೆಡ್ ಮತ್ತು ಇತರರು-ವಿರುದ್ಧ-ತಾಡಿ ಆದಿನಾರಾಯಣ ರೆಡ್ಡಿ ಮತ್ತು ಇತರರು 1997 (5) ಎಸ್‌ಸಿಸಿ 446

11. ಹರಭಜನ್ ಸಿಂಗ್-ವಿರುದ್ಧ ಭಾರತ ಮುದ್ರಣ ಪರಿಷತ್ ಮತ್ತು ಇತರರು 2002 (3) ಎಸ್‌ಸಿ 722

12. ಬಿ.ಪಿ. ಸಿಂಘಾಲ್-ವಿರುದ್ಧ ಭಾರತ ಒಕ್ಕೂಟ 2010 (6) ಎಸ್‌ಸಿಸಿ 311

13. ಜೀವನ್‌ರಾವ್ ವಿಶ್ವನಾಥರಾವ್ ಗೋರೆ-ವಿರುದ್ಧ-ಮಹಾರಾಷ್ಟ್ರ ರಾಜ್ಯ ಮತ್ತು ಇತರರು 2015 (5) ಎಮ್‌ಹೆಚ್.ಎಲ್.ಜೆ. 375

14. ಧ್ಯಾನೇಶ್ವರ್ ದಿಗಂಬರ್ ಕಾಂಬ್ಳೆ-ವಿರುದ್ಧ-ಮಹಾರಾಷ್ಟ್ರ ಮತ್ತು ಇತರರು2016 (1) ಎಮ್ ಹೆಚ್.ಎಲ್.ಜೆ. 602

12. ನಾಲ್ಕನೇ ಪ್ರತಿವಾದಿ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ಎಸ್.ಎಸ್. ನಾಗಾನಂದ ಅವರು, ಇದು ಇಷ್ಟಪರಂತ ತತ್ವದ ಒಂದು ಸರಳ ಮೊಕದ್ದಮೆಯಾಗಿದ್ದು, 4 ನೇ ಪ್ರತಿವಾದಿ ಕಂಪನಿಯ ನಿಯಮಾವಳಿಯ 74 ನೇ ಅನುಚ್ಛೇದದ ನಿಬಂಧನೆಗಳನುಸಾರ, ಸರ್ಕಾರವು ಒಬ್ಬ ನಿರ್ದೇಶಕನನ್ನು ನಾಮನಿರ್ದೇಶಿಸಲು ಮತ್ತು ನೇಮಕ ಮಾಡಲು ಅಥವಾ ತೆಗೆದುಹಾಕಲು ಅಧಿಕಾರ ಹೊಂದಿದೆ ಹಾಗೂ ಅದನ್ನು ಪ್ರಶ್ನಿಸಲು ನಾಮನಿರ್ದೇಶನಗೊಂಡ ನಿರ್ದೇಶಕನಲ್ಲಿ ಯಾವುದೇ ಹಕ್ಕು ನಿಹಿತವಾಗಿಲ್ಲ; ನಿರ್ದೇಶಕನಾಗಿ ನಾಮನಿರ್ದೇಶನಗೊಂಡ ಅಧಿಕಾರಿಯು ಆದೇಶ ಮಾಡಿದ ದಿನಾಂಕದಿಂದ ಜಾರಿಗೆ ಬರುವಂತೆ ಹುದ್ದೆಯನ್ನು ವಹಿಸಿಕೊಳ್ಳುವುದು ಪದ್ಧತಿಯಾಗಿದೆ ಮತ್ತು ಅರ್ಜಿದಾರನೂ ಸಹ ತನ್ನ ನೇಮಕಾತಿ ಸಮಯದಲ್ಲಿ ಇದೇ ಪದ್ಧತಿಯನ್ನು ಅಳವಡಿಸಿಕೊಂಡಿದ್ದರೆಂದು ವಾದಿಸಿದ್ದಾರೆ ಹಾಗೂ ತಮ್ಮ ವಾದವನ್ನು ಮುಂದವರೆಸಿ, ಮೂರನೇ ಪ್ರತಿವಾದಿಯನ್ನು ನಿರ್ದೇಶಕರನ್ನಾಗಿ ನೇಮಕ ಮಾಡಿ ಮಂಡಳಿಯು ಗೊತ್ತುವಳಿಯನ್ನು ಅಂಗೀಕರಿಸಿದೆ ಎಂದು ಹಾಗೂ ಮೂರನೇ ಪ್ರತಿವಾದಿಯು ಸಹ ದಿನಾಂಕ: 23.07.2019 ರಿಂದ ಜಾರಿಗೆ ಬರುವಂತೆ ಪ್ರಭಾರವನ್ನು ವಹಿಸಿಕೊಂಡಿದ್ದಾರೆಂದು ನಿವೇದಿಸಿಕೊಂಡಿದ್ದಾರೆ.

13. 4 ನೇ ಪ್ರತಿವಾದಿ ಪರ ಮಾನ್ಯ ಹಿರಿಯ ನ್ಯಾಯವಾದಿಗಳು, ದಿನಾಂಕ: 16.08.2018 ಮತ್ತು ದಿನಾಂಕ: 23.07.2019 ರ ಪ್ರಭಾರ ಹಸ್ತಾಂತರಿಸುವುದಕ್ಕೆ ಸಂಬಂಧಿಸಿದ ದಿನಾಂಕ: 06.09.2019 ರ ಜ್ಞಾಪನಪತ್ರದ ಕಡೆಗೆ ಮತ್ತು ಲಗತ್ತಿಸಲಾದ ವರದಿಗಳ ಕಡೆಗೆ ನ್ಯಾಯಾಲಯದ ಗಮನವನ್ನು ಸೆಳೆದಿದ್ದಾರೆ. ಅವರು, ಮೊದಲ ವರದಿಯು, ಅರ್ಜಿದಾರರು ಪ್ರಭಾರ ವಹಿಸಿಕೊಳ್ಳುವುದಕ್ಕೆ ಸಂಬಂಧಿಸಿದ ಸಾಕ್ಷ್ಯವಾಗಿದೆ ಮತ್ತು ಎರಡನೇ ವರದಿಯು, ಮೂರನೇ ಪ್ರತಿವಾದಿಗೆ ಅರ್ಜಿದಾರರು ಪ್ರಭಾರ ಹಸ್ತಾಂತರಿಸಿದ್ದರೆಂದು ಆರೋಪಿಸಲಾದ ಸಾಕ್ಷ್ಯವಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ. ಮಾನ್ಯ ಹಿರಿಯ ನ್ಯಾಯವಾದಿಗಳು, ದಿನಾಂಕ: 09.09.2019 ರ ಜ್ಞಾಪನ ಪತ್ರದೆಡೆಗೆ ನ್ಯಾಯಾಲಯದ ಗಮನವನ್ನು ಸೆಳೆದು, ಲಗತ್ತಿಸಲಾದ ದಸ್ತಾವೇಜುಗಳನ್ನು ಎಂದರೆ ದಿನಾಂಕ: 07.08.2019 ರ ಮಂಡಳಿಯ ಗೊತ್ತುವಳಿಯನ್ನು ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ ಮತ್ತು ಕಂಪನಿಗಳ ಅಧಿನಿಯಮವು ಕಡ್ಡಾಯಗೊಳಿಸಿದ ಔಪಚಾರಿಕ ಪ್ರಕ್ರಿಯೆಗಳನ್ನು ಯುಕ್ತವಾಗಿ ಅನುಪಾಲಿಸಲಾಗಿದೆ, ಹಾಗಾಗಿ, ನಾಮನಿರ್ದೇಶನಕ್ಕೆ ಮತ್ತು 4 ನೇ ಪ್ರತಿವಾದಿ ಕಂಪನಿಯ ಮಂಡಳಿಗೆ ಮೂರನೇ ಪ್ರತಿವಾದಿಯ ನಾಮನಿರ್ದೇಶನ ಮತ್ತು ನೇಮಕಾತಿಗೆ ಯಾವುದೇ ಅಸ್ಥಿರತೆಯನ್ನು ಆರೋಪಿಸಲಾಗುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ. ಅರ್ಜಿದಾರರನ್ನು ನೇಮಕ ಮಾಡುವ ಸಮಯದಲ್ಲಿ ಮಂಡಳಿಯು ಅಂಗೀಕರಿಸಿದ್ದ ದಿನಾಂಕ: 18.09.2018 ರ ಇಂಥಹುದೇ ಗೊತ್ತುವಳಿಯನ್ನು ಸಹ ದಾಖಲೆಯಲ್ಲಿ ಮಂಡಿಸಲಾಗಿದೆ.

14. ಸರ್ಕಾರದ ಕ್ರಮಗಳಲ್ಲಿ ದೋಷ ಕಂಡುಹಿಡಿಯಲಾಗುವುದಿಲ್ಲ ಮತ್ತು ಒಂದು ಹುದ್ದೆಗೆ ನೇಮಕಾತಿ ಮಾಡುವುದು ಹಾಗೂ ಹುದ್ದೆಯಲ್ಲಿ ಮುಂದುವರಿಸುವುದು ಸರ್ಕಾರದ ಇಷ್ಟಪರಂತ ಇರುತ್ತದೆ ಮತ್ತು ಸರ್ಕಾರವು, ತನ್ನ ನಾಲ್ಕನೇ ಪ್ರತಿವಾದಿ ಮಂಡಳಿಗೆ ಮೂರನೇ ಪ್ರತಿವಾದಿಯನ್ನು ನಾಮನಿರ್ದೇಶಿತ ನಿರ್ದೇಶಕರನ್ನಾಗಿ ನಾಮ ನಿರ್ದೇಶನ ಮಾಡುವುದು ಮತ್ತು ನೇಮಕ ಮಾಡಿರುವುದು ತನ್ನ ವಿವೇಚನಾನುಸಾರ ವಿಹಿತವೆಂದು ಭಾವಿಸಿರುವುದರಿಂದ ಅರ್ಜಿದಾರರಿಗೆ ಸದರಿ ಹುದ್ದೆಯಲ್ಲಿ

ಉಳಿಯುವ ಯಾವುದೇ ಹಕ್ಕನ್ನು ನಿಹಿತಗೊಳಿಸಿಲ್ಲವಾದ್ದರಿಂದ, ಅದು ವ್ಯಾಜ್ಯದ ವಸ್ತುವಿಷಯವಾಗುವುದಿಲ್ಲ ಹಾಗೂ ಸರ್ಕಾರವು ತನಗೆ ಅತ್ಯುತ್ತಮವೆನಿಸುವ ರೀತಿಯಲ್ಲಿ ಆಡಳಿತಾತ್ಮಕ ಅವಶ್ಯಕತೆಗಳನುಸಾರ ಕಾರ್ಯನಿರ್ವಹಿಸುವುದು ಅದರ ಸಾರ್ವಭೌಮತೆಯಾಗಿದೆ ಎಂದು ಮಾನ್ಯ ಹೆಚ್ಚುವರಿ ಸರ್ಕಾರಿ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ ಮತ್ತು ಅವರು ಪ್ರಸ್ತುತ ರಿಟ್ ಅರ್ಜಿಯಲ್ಲಿನ ಪ್ರಶ್ನಿತ ಆದೇಶವನ್ನು ಸಮರ್ಥಿಸಿಕೊಂಡಿದ್ದಾರೆ.

15. ಇದಕ್ಕೆ ತದ್ವಿರುದ್ಧವಾಗಿ, ಮಾನ್ಯ ಹಿರಿಯ ನ್ಯಾಯವಾದಿ ಶ್ರೀ ಎಂ.ಎನ್. ನಾಗಪ್ರಸನ್ನ ಅವರು ತಮ್ಮ ಉತ್ತರದಲ್ಲಿ, ಇಷ್ಟಪರಂತ ತತ್ವಕ್ಕೆ ಸಂಬಂಧಿಸಿದ ನಿಯಮವನ್ನು, ಬಿ.ಪಿ. ಸಿಂಘಾಲ್-ವಿರುದ್ಧ ಭಾರತ ಒಕ್ಕೂಟ (ಮೇಲಿನ) ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಾಂವಿಧಾನಿಕ ಪೀಠವು ಚ ಇತ್ಯರ್ಥಗೊಳಿಸಿದೆ ಎಂದು ವಾದಿಸಿರುವರು. ಅವರು, ಅಧಿಕಾರದ ಚಲಾವಣೆಯು ಪ್ರಾಧಿಕಾರದ ಇಷ್ಟಾನುಸಾರವಾಗಿ ಅಥವಾ ಅಪೇಕ್ಷೆಗೆ ತಕ್ಕಂತೆ ಇರಲು ಸಾಧ್ಯವಿಲ್ಲ. ಸಿಂಧುವಾದ ಕಾರಣವಿದ್ದಾಗ ಮಾತ್ರ ಅದು ಸಾಧ್ಯವಾಗುತ್ತದೆ ಎಂದು ವಾದಿಸಿದ್ದಾರೆ. ರಿಟ್ ಅರ್ಜಿಯ ಸಮರ್ಥನೀಯತೆಗೆ ಸಂಬಂಧಿಸಿದಂತೆ ಅವರು 12 ನೇ ಕಂಡಿಕೆಯ ಕಡೆ ಈ ನ್ಯಾಯಾಲಯದ ಗಮನ ಸೆಳೆದಿದ್ದಾರೆ.

16. ಈ ನ್ಯಾಯಾಲಯದ ಅಭಿಪ್ರಾಯದಲ್ಲಿ, ಅರ್ಜಿದಾರರನ್ನು ನಾಮನಿರ್ದೇಶಿಸಿದ್ದ ಮತ್ತು ನೇಮಕ ಮಾಡಿದ್ದ ಹುದ್ದೆಯಿಂದ ಅವರನ್ನು ಹೊರದೂಡಿರುವ ಕಾರಣ, ಅವರು ಬಾಧಿತ ವ್ಯಕ್ತಿಯಾಗಿರುವುದರಿಂದ ಹೆಚ್ಚಿನ ಪದಚ್ಯುತಿಯು ಅನಗತ್ಯ.

17. ಇದಲ್ಲದೆ ಮಾನ್ಯ ಹಿರಿಯ ನ್ಯಾಯವಾದಿಗಳು, 16 ರಿಂದ 24 ನೇ ಕಂಡಿಕೆಗಳ ಕಡೆಗೆ ಈ ನ್ಯಾಯಾಲಯದ ಗಮನವನ್ನು ಸೆಳೆದಿದ್ದು, ಅದರಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಇಷ್ಟಪದ್ಯಂತ ತತ್ವದ ಮೂಲವನ್ನು ಹುಡುಕಿದ ನಂತರ ವಿವಿಧ ನ್ಯಾಯಿಕ ಘೋಷಣೆಗಳ, ಪ್ರಸಿದ್ಧ ನ್ಯಾಯಾಧೀಶರಾದ ಶ್ರೀ ಹೆಚ್.ಎಂ. ಸೀರ್ವಾಯಿಯವರ ತಮ್ಮ ಕೌಲುಗಳಲ್ಲಿ ನೀಡಿರುವ ಅಭಿಪ್ರಾಯ ಅ ಮತ್ತು ಬ್ಲಾಕ್ಸ್ ಕಾನೂನು ಪದಕೋಶದಲ್ಲಿ ಇಷ್ಟಪರಂತ ನೇಮಕಾತಿ ಪದದ ಪರಿಭಾಷೆಯ ಹಿನ್ನೆಲೆಯಲ್ಲಿ ಈ ತತ್ವದ ವ್ಯಾಪ್ತಿಯನ್ನು ವಿಶ್ಲೇಷಿಸಿ, ಆ ತರುವಾಯ 33 ನೇ ಮತ್ತು 34 ನೇ ಕಂಡಿಕೆಗಳಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

" 33. ಮೂಲತಃ ಇಂಗ್ಲೆಂಡ್‌ನಲ್ಲಿ ಪದ್ಯಾಲೋಚಿಸಿದ್ದಂತ ಇಷ್ಟಪರಂತ ತತ್ವವು ನಿರ್ಬಂಧರಹಿತ ಪರಮಾಧಿಕಾರವಾಗಿತ್ತು. ಅಂದರೆ, ಇಷ್ಟಪರಂತ ಹುದ್ದೆಯನ್ನು ಧಾರಣ ಮಾಡಿದ ವ್ಯಕ್ತಿಯನ್ನು, ಯಾವುದೇ ಸಮಯದಲ್ಲಿ, ನೋಟೀಸ್ ಇಲ್ಲದೆ, ಕಾರಣ ನೀಡದೆ ಮತ್ತು ಯಾವುದೇ ಕಾರಣವನ್ನು ತೋರಿಸದೆ ತೆಗೆದುಹಾಕಬಹುದಾಗಿತ್ತು. ಆದರೆ, ಕಾನೂನು ಪ್ರಭುತ್ವ ಚಾಲ್ತಿ ಇರುವಲ್ಲಿ, ಅನಿರ್ಬಂಧಿತ ವಿವೇಚನೆ ಅಥವಾ ಕಾರಣರಹಿತ ಕ್ರಮ ಎನ್ನುವಂಥದ್ದೇನೂ ಇರುವುದಿಲ್ಲ. ಕಾರಣದ ಅಗತ್ಯತೆಯ ಪ್ರಮಾಣವು ವ್ಯತ್ಯಾಸಗೊಳ್ಳಬಹುದು. ನ್ಯಾಯಿಕ ಮರುಪರಿಶೀಲನೆಯ ಅವಧಿಯಲ್ಲಿ ಪರಿಶೀಲನೆಯ ಪ್ರಮಾಣವು ವ್ಯತ್ಯಾಸ ಗೊಳ್ಳಬಹುದು. ಆದರೆ, ಕಾರಣದ ಅಗತ್ಯತೆ ಅಸ್ತಿತ್ವದಲ್ಲಿರುತ್ತದೆ.

ತತ್ಪರಿಣಾಮವಾಗಿ, ಭಾರತ ಸಂವಿಧಾನವು, ಕೆಲವು ಹುದ್ದೆಗಳನ್ನು ರಾಷ್ಟ್ರಪತಿಗಳ ಇಷ್ಟಪರಂತದ ಅವಧಿಗೆ, ಯಾವುದೇ ವ್ಯಕ್ತ ಪರಿಮಿತಿಗಳಿಲ್ಲದೆ ಅಥವಾ ನಿರ್ಬಂಧಗಳಿಲ್ಲದೆ ಧಾರಣ ಮಾಡಬೇಕೆಂದು ಉಪಬಂಧಿಸಿದೆಯಾದಾಗ್ಯೂ, ಅತ್ಯಾವಶ್ಯಕವಾಗಿ ಅದನ್ನು " ಸಂವಿಧಾನಬದ್ಧ ಆಡಳಿತದ ಮೂಲ ತತ್ವಗಳಿಗೆ " ಒಳಪಟ್ಟಿರಬೇಕೆಂದು ಓದಬೇಕಾಗುತ್ತದೆ. ಆದುದರಿಂದ, ಸಾಂವಿಧಾನಿಕ ವ್ಯವಸ್ಥೆಯಲ್ಲಿ, ಯಾವುದೇ ಒಂದು ಪ್ರಾಧಿಕಾರದ ಇಷ್ಟಪರಂತ ಅವಧಿಗೆ ಒಂದು ಹುದ್ದೆ ಇದ್ದಾಗ, ಮತ್ತು " ಇಷ್ಟಪರಂತ " ತತ್ವಕ್ಕೆ ಯಾವುದೇ ಪರಿಮಿತಿಗಳು ಅಥವಾ ನಿರ್ಬಂಧಗಳು ಇರದಿದ್ದರೆ, ಅದರರ್ಥ, ಪದ ಧಾರಣ ಮಾಡಿದ ವ್ಯಕ್ತಿಯನ್ನು, ಯಾವ ಪ್ರಾಧಿಕಾರದ ಇಷ್ಟಪರಂತ ಆತನು ಪದ ಧಾರಣ ಮಾಡಿರುವನೋ ಆ ಪ್ರಾಧಿಕಾರವು, ಯಾವುದೇ ಸಮಯದಲ್ಲಿ, ನೋಟೀಸ್ ನೀಡದೆ ಮತ್ತು ಯಾವುದೇ ಕಾರಣವನ್ನು ನೀಡದೆ ತೆಗೆದುಹಾಕಬಹುದಾಗಿದೆ.

34. ಆದಾಗ್ಯೂ, ಇಷ್ಟಪರಂತ ತತ್ವವು, ನಿರಂಕುಶವಾಗಿ, ಮನಸೋ ಇಚ್ಛೆ ಅಥವಾ ಖಯಾಲಿಯಂತೆ ಅನಿರ್ಬಂಧಿತ ವಿವೇಚನಾನುಸಾರ ಚ ಕಾರನಿರ್ವಹಿಸಲು ನೀಡಿದ ಪರವಾನಗಿಯಲ್ಲ. ಅದು, ಇಷ್ಟಾನುಸಾರ ಹಿ ಂ ಪಡೆಯುವುದಕ್ಕೆ ಕಾರಣವಾಗುವ ಅಗತ್ಯತೆಯನ್ನು ಇಲ್ಲವಾಗಿಸುವುದಿಲ್ಲ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ' ಇಷ್ಟಪರಂತ " ತತ್ವವು, ಪ್ರಾಧಿಕಾರದ ಇಷ್ಟದಂತೆ, ಸಂಕ್ಷಿಪ್ತವಾಗಿ, ನೋಟೀಸನ್ನು ನೀಡುವ ಯಾವುದೇ ಬಾಧ್ಯತೆ ಇಲ್ಲದೆ ಮತ್ತು ಯಾವುದೇ ಕಾರಣಗಳನ್ನು ನೀಡುವ ಯಾವುದೇ ಬಾಧ್ಯತೆ ಇಲ್ಲದೆ ಅಥವಾ ತೆಗೆದುಹಾಕುವಿಕೆಗೆ ಅಥವಾ ಇಷ್ಟದಂತೆ ಹಿಂಪಡೆಯುವ ಯಾವುದೇ ಕಾರಣವನ್ನು ವ್ಯಕ್ತಪಡಿಸದೆ, ಪದಧಾರಣ ಮಾಡಿದ ವ್ಯಕ್ತಿಯನ್ನು ತೆಗೆದುಹಾಕುವುದನ್ನು ಸಾಧ್ಯವನ್ನಾಗಿಸುತ್ತದೆ. ಇಷ್ಟಾನುಸಾರ ಹಿಂಪಡೆಯುವುದು, ಪ್ರಾಧಿಕಾರದ ಇಷ್ಟಾನುಸಾರ ಅಥವಾ ಅಪೇಕ್ಷೆಗೆ ತಕ್ಕಂತೆ ಇರಲು ಸಾಧ್ಯವಿಲ್ಲ. ಸಿಂಧುವಾದ ಕಾರಣವಿದ್ದಾಗ ಮಾತ್ರ ಅದು ಸಾಧ್ಯವಾಗುತ್ತದೆ ”.

18. ಮಾನ್ಯ ಹಿರಿಯ ನ್ಯಾಯವಾದಿಗಳು, 34 ನೇ ಕಂಡಿಕೆಯಲ್ಲಿನ ನಿರ್ಣಯಗಳಿಗೆ ಒತ್ತು ನೀಡಿ, ಅಧಿಕಾರವನ್ನು ಚಲಾಯಿಸುವ ಪ್ರಾಧಿಕಾರವು, 34 ನೇ ಕಂಡಿಕೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಇತ್ಯರ್ಥಗೊಳಿಸಿದ ಮಾನದಂಡಗಳ ವ್ಯಾಪ್ತಿಯೊಳಗೆ ಅದನ್ನು ಚಲಾಯಿಸುವ, ಎಂದರೆ ಸಿಂಧುವಾದ ಕಾರಣಗಳಿಗಾಗಿ ಮಾತ್ರ ಚಲಾಯಿಸುವ ಅಗತ್ಯತೆ ಇದೆ ಎಂದು ವಾದಿಸಿದ್ದಾರೆ.

19. ಮಾನ್ಯ ಹಿರಿಯ ನ್ಯಾಯವಾದಿಗಳು, ದಿನಾಂಕ: 26.07.2019 ರ ಟಿಪ್ಪಣಿಯನ್ನವಲಂಬಿಸಿ, ದಿನಾಂಕ: 07.08.2019 ರ ಗೊತ್ತುವಳಿಯನ್ನು ಅಂಗೀಕರಿಸುವಲ್ಲಿ ಮಂಡಳಿಯು ತಪ್ಪೆಸಗಿದೆ ಎಂದು ವಾದಿಸಿದ್ದಾರೆ. ಮಂಡಳಿಯು ಮೂರನೇ ಪ್ರತಿವಾದಿಯನ್ನು ನಿರ್ದೇಶಕರನ್ನಾಗಿ ನೇಮಕ ಮಾಡಲು ನಿರ್ಧರಿಸದೆ ಇದ್ದದ್ದರಿಂದ, ನಾಮನಿರ್ದೇಶನ ಮತ್ತು ಪ್ರಭಾರ ವಹಿಸಿಕೊಳ್ಳುವುದು ಯಾವುದೇ ಪರಿಣಾಮ ಹೊಂದಿರುವುದಿಲ್ಲ ಹಾಗೂ ಗೊತ್ತುವಳಿ ಇಲ್ಲದೆ ಇರುವಲ್ಲಿ, ಮೂರನೇ ಪ್ರತಿವಾದಿಯು ಹುದ್ದೆಯನ್ನು ವಹಿಸಿಕೊಳ್ಳಲಾಗುವುದಿಲ್ಲವಾದ್ದರಿಂದ, ದಿನಾಂಕ: 23.07.2019 ರ ವ್ಯವಹರಣೆಗಳು, ಕಾನೂನಿನ ದೃಷ್ಟಿಯಲ್ಲಿ ತಪ್ಪು ಕಲ್ಪನೆಯಾಗಿರುವುದು ಎಂಬ ಪರಿಗಣನೆಯಿಂದ

ಬಿಟ್ಟುಬಿಡಬೇಕೆಂದು ವಾದಿಸಬಹುದಾಗಿತ್ತು ಎಂದು ಅವರು ವಾದಿಸಿದ್ದಾರೆ. 2015 (5) ಎಂಹೆಚ್.ಎಲ್.ಜೆ. 375 ರಲ್ಲಿ ವರದಿಯಾದ ಬಾಂಬೆ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪನ್ನು ಅವಲಂಬಿಸಿದ್ದು, ರಾಜ್ಯ ಚ ರಸ್ತೆ ಸಾರಿಗೆ ನಿಗಮದ ಮಂಡಳಿಯ ಅಧ್ಯಕ್ಷ ಮತ್ತು ಅಧಿಕಾರೇತರ ನಿರ್ದೇಶಕರ ಪದಾವಧಿಯನ್ನು ಕೊನೆಗೊಳಿಸುವ ಮತ್ತು ಅವರನ್ನು ತೆಗೆದುಹಾಕುವ ಇಂಥಹುವೇ ಸಂದರ್ಭಗಳಲ್ಲಿ, ಹಸ್ತಕ್ಷೇಪ ಮಾಡಲಾಗಿತ್ತು ಮತ್ತು ಬಿ.ಪಿ. ಸಿಂಘಾಲ್ ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ತತ್ವಗಳನ್ನನುಸರಿಸಿ, ತೆಗೆದುಹಾಕುವ/ಕೊನೆಗೊಳಿಸುವ ಆದೇಶವನ್ನು ರದ್ದುಗೊಳಿಸಲಾಯಿತು ಎಂದು ವಾದಿಸಿದ್ದಾರೆ. ಅವರು, ಇಷ್ಟಪರಂತ ತತ್ವವನ್ನು ಅನ್ವಯಿಸಿ, ಸರ್ಕಾರಿ ಕಂಪನಿಯ ಅಧ್ಯಕ್ಷರ ಹುದ್ದೆಯನ್ನು ಕೊನೆಗೊಳಿಸುವಿಕೆಗೆ ಸಂಬಂಧಿಸಿದ 2016 (1) ಎಂಹೆಚ್. ಎಲ್.ಜೆ. 602 ರಲ್ಲಿ ವರದಿಯಾದ ಬಾಂಬೆ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಮತ್ತೊಂದು ತೀರ್ಪನ್ನು ಸಹ ಅವಲಂಬಿಸಿದ್ದು, ಅದರಲ್ಲಿ ಮತ್ತೊಮ್ಮೆ ಮಾನ್ಯ ವಿಭಾಗೀಯ ಪೀಠವು ಆದೇಶದಲ್ಲಿ ಹಸ್ತಕ್ಷೇಪ ಮಾಡುವುದು ಮತ್ತು ರದ್ದುಗೊಳಿಸುವುದು ಅವಶ್ಯಕವೆಂದು ಭಾವಿಸಿದೆ.

ಮುಖ್ಯ ಟಿಪ್ಪಣಿ (ಬಿ) ಯನ್ನು ಈ ಕೆಳಗಿನಂತೆ ಓದಲಾಗಿದೆ:

" (ಬಿ) ಇಷ್ಟಪರಂತ ತತ್ವ-ಅಧಿಕಾರ ಚಲಾಯಿಸುವ ವ್ಯಾಪ್ತಿ ಇಷ್ಟಾನುಸಾರ ಹಿಂಪಡೆಯುವುದು, ರಾಜ್ಯ ಸರ್ಕಾರದ ಇಷ್ಟಾನುಸಾರ ಅಥವಾ ಅಪೇಕ್ಷೆಗೆ ತಕ್ಕಂತೆ ಇರಲು ಸಾಧ್ಯವಿಲ್ಲ, ಅದನ್ನು ಸಿಂಧುವಾದ ಕಾರಣಗಳಿದ್ದಾಗ ಮಾತ್ರವೇ ಚಲಾಯಿಸಲು ಸಾಧ್ಯ-ಇದಲ್ಲದೆ, ಇಷ್ಟಾನುಸಾರ ಹಿಂಪಡೆಯುವ ಅಧಿಕಾರವನ್ನು ಸಕಾರಣವಾಗಿ ಮತ್ತು ಸಾರ್ವಜನಿಕ ಒಳಿತಿಗಾಗಿ ಮಾತ್ರವೇ ಬಳಸಬಹುದಾಗಿದೆ. "

ಯಾವುದೇ ಸರ್ಕಾರ ಅಥವಾ ಪ್ರಾಧಿಕಾರವು, ತಾನು ಇಚ್ಛಿಸುವಂತೆ ಕಾರ್ಯನಿರ್ವಹಿಸುವ ಹಕ್ಕನ್ನು ಹೊಂದಿರುತ್ತದೆ. ಇಷ್ಟಪರಂತ ತತ್ವ ಎಂಬುದು ನಿರಂಕುಶವಾಗಿ, ಮನಸೋಇಚ್ಛೆಯಾಗಿ ಅಥವಾ ಖಯಾಲಿಯಂತೆ ಕಾರ್ಯನಿರ್ವಹಿಸುವ ಪರವಾನಗಿಯಾಗುವುದಿಲ್ಲ. ಯಾವುದೇ ಸರ್ಕಾರಿ ಪ್ರಾಧಿಕಾರದ ಮೇಲೆ ನಿರುಪಾಧಿಕವಾಗಿ ಮತ್ತು ಅನಿಯಂತ್ರಿತವಾಗಿ ಪ್ರದತ್ತಗೊಳಿಸಿದ ವಿವೇಚನಾಧಿಕಾರಗಳನ್ನು, ಅವಶ್ಯವಾಗಿ ಮತ್ತು ನಿಶ್ಚಿತವಾಗಿ ಯುಕ್ತ ರೀತಿಯಲ್ಲಿ ಮತ್ತು ಸಾರ್ವಜನಿಕರ ಒಳಿತಿಗಾಗಿ ಅದನ್ನು ಚಲಾಯಿಸಬೇಕಾಗುತ್ತದೆ ಎಂದು ಭಾವಿಸಲಾಗಿದೆ. ಆದಾಗ್ಯೂ, ಇಷ್ಟಪರಂತ ತತ್ವವು, ನಿರಂಕುಶವಾಗಿ, ಮನಸೋಇಚ್ಛೆಯಾಗಿ ಅಥವಾ ಖಯಾಲಿಯಂತೆ ಕಾರನಿರ್ವಹಿಸುವ ಅನಿಯಂತ್ರಿತ ವಿವೇಚನಾಧಿಕಾರದೊಂದಿಗೆ ಕಾರನಿರ್ವಹಿಸುವ ಪರವಾನಗಿಯಾಗಿರುವುದಿಲ್ಲ. ಇಷ್ಟಾನುಸಾರ ಹಿಂಪಡೆಯುವುದಕ್ಕೆ ಇರುವ ಕಾರಣದ ಅಗತ್ಯತೆಯೊಂದಿಗೆ ಅದನ್ನು ನಿರ್ವಹಿಸಲಾಗುವುದಿಲ್ಲ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, " ಇಷ್ಟಪರಂತ " ತತ್ವವು ಪ್ರಾಧಿಕಾರದ ಇಷ್ಟಾನುಸಾರ, ಸಂಕ್ಷಿಪ್ತವಾಗಿ ನೋಟೀಸನ್ನು ನೀಡುವ ಯಾವುದೇ ಬಾಧ್ಯತೆ ಇಲ್ಲದೆ ಮತ್ತು ಯಾವುದೇ ಕಾರಣಗಳನ್ನು ನೀಡುವ ಬಾಧ್ಯತೆ ಇಲ್ಲದೆ ಅಥವಾ ತೆಗೆದುಹಾಕುವುದಕ್ಕೆ ಅಥವಾ ಇಷ್ಟಾನುಸಾರ ಹಿಂಪಡೆಯುವುದಕ್ಕೆ ಯಾವುದೇ ಕಾರಣವನ್ನು

ವ್ಯಕ್ತಪಡಿಸದೆ, ಪದ ಧಾರಣ ಮಾಡಿದ ವ್ಯಕ್ತಿಯನ್ನು ತೆಗೆದುಹಾಕುವುದನ್ನು ಸಾಧ್ಯವನ್ನಾಗಿಸುತ್ತದೆ, ಇಷ್ಟಾನುಸಾರ ಹಿಂಪಡೆಯುವುದು, ಪ್ರಾಧಿಕಾರದ ಇಷ್ಟಾನುಸಾರ ಅಥವಾ ಅಪೇಕ್ಷೆಗೆ ತಕ್ಕಂತೆ ಇರಲು ಸಾಧ್ಯವಿಲ್ಲ. ಸಿಂಧುವಾದ ಕಾರಣಗಳಿದ್ದಾಗ ಮಾತ್ರವೇ ಅದು ಸಾಧ್ಯವಾಗುತ್ತದೆ ".

20. ವಿಭಾಗೀಯ ಪೀಠವು ರಿಟ್ ಅರ್ಜಿಗಳನ್ನು ಪುರಸ್ಕರಿಸಿ, ಈ ಮುಂದಿನಂತೆ 24 ನೇ ಕಂಡಿಕೆಯಲ್ಲಿ ಅಭಿಪ್ರಾಯಪಟ್ಟಿದೆ:

" 24. ಇಲ್ಲಿ ನಾವು ಗಮನಿಸಬಹುದಾದುದೆಂದರೆ, ಎರಡನೇ ಅಫಿಡಾವಿನೊಂದಿಗೆ, ರಾಜ್ಯವು, ಹಿಂದಿನ ಸರ್ಕಾರವು ಅಧ್ಯಕ್ಷರನ್ನು ನೇಮಕ ಮಾಡಿದುದಕ್ಕೆ ಸಂಬಂಧಿಸಿದ ಸುಸಂಗತ ದಸ್ತಾವೇಜುಗಳನ್ನು ಹಾಜರುಪಡಿಸಿದೆ. ಆದಾಗ್ಯೂ, ರಾಜ್ಯ ಸರ್ಕಾರವು, ಪ್ರಶ್ನಿತ ಆದೇಶವನ್ನು ಹೊರಡಿಸುವಾಗ, ಅದು ಸಿಂಧುವಾದ ಕಾರಣಗಳನ್ನು ದಾಖಲಿಸಿತ್ತೇ ಅಥವಾ ಪರಿಗಣಿಸಿತ್ತೆ ಎಂಬುದಕ್ಕೆ ಯಾವುದೇ ದಸ್ತಾವೇಜನ್ನು ಹಾಜರುಪಡಿಸಿರುವುದಿಲ್ಲ. 20 ನೇ ಜನವರಿ, 2015 ರ ಮೊದಲ ಅಪಿಡಾವಿಟ್‌ನಲ್ಲಿ, ರಾಜ್ಯ ಸರ್ಕಾರವು ಯಾವುದೇ ಸಿಂಧುವಾದ ಕಾರಣಗಳು ಇರುವ ಕುರಿತು ವಾದಿಸಿಲ್ಲ ಎಂಬುದನ್ನು ಗಮನಿಸುವುದು ಸಮಂಜಸವಾಗಿದೆ. ಅಂಥ ಕಾರಣಗಳ ಇರುವಿಕೆಯ ಸಂಗತಿ ಬಗ್ಗೆ ಸದರಿ ಅಫಿಡಾವಿಟ್ ಸಂಪೂರ್ಣವಾಗಿ ಮೌನವಾಗಿದೆ. ಸದರಿ ಕಾರಣಗಳನ್ನು ದಿನಾಂಕ: 17 ನೇ ಫೆಬ್ರುವರಿ, 2015 ರ ಅಫಿಡಾವಿಟ್‌ನ 4 ನೇ ಕಂಡಿಕೆಯಲ್ಲಿ ತರುವಾಯ ವಾದಿಸಲಾಗಿದ್ದು, ಅದನ್ನು ಮೇಲೆ ನಮೂದಿಸಲಾಗಿದೆ. ಪ್ರಶ್ನಿತ ಆದೇಶವನ್ನು ಹೊರಡಿಸುವಾಗ, ರಾಜ್ಯ ಸರ್ಕಾರವು ಯಾವುದೇ ಸಿಂಧುವಾದ ಕಾರಣವನ್ನು ದಾಖಲಿಸಿತ್ತೆಂದು ತೋರಿಸುವ ಒಂದೇ ಒಂದು ದಸ್ತಾವೇಜನ್ನು ಸಹ ದಾಖಲೆಯಲ್ಲಿ ಸೇರಿಸಿಲ್ಲ. ಇಷ್ಟಾನುಸಾರ ಹಿಂಪಡೆಯುವಿಕೆಯನ್ನು ಯುಕ್ತ ಕಾರಣಕ್ಕಾಗಿ ಮತ್ತು ಸಾರ್ವಜನಿಕ ಒಳಿತಿಗಾಗಿ ಮಾಡಲಾಯಿತು ಎಂದು ತೋರಿಸಲು, ಈ ನ್ಯಾಯಾಲಯದ ಅವಗಾಹನೆಗೆ ಸುಸಂಗತ ದಸ್ತಾವೇಜುಗಳನ್ನು ಹಾಜರುಪಡಿಸಲು ರಾಜ್ಯ ಸರ್ಕಾರಕ್ಕೆ ಯಾವುದೇ ಅಡೆತಡೆ ಇರಲಿಲ್ಲ. ತರುವಾಯದ ಅಫಿಡಾವಿಟ್‌ನಲ್ಲಿ ಏನು ಹೇಳಲಾಗಿದೆಯೋ ಅದು ಸ್ಪಷ್ಟವಾಗಿ ನಂತರದ ಯೋಚನೆಯಾಗಿದೆ. ಯಾವುದೇ ಸಂದರ್ಭದಲ್ಲೂ, ಅಫಿಡಾವಿಟ್ ಮೂಲಕವಾಗಿ ಕಾರಣಗಳನ್ನು ನೀಡಲಾಗುವುದಿಲ್ಲ. ಬಿ.ಪಿ. ಸಿಂಘಾಲ್ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ನಿಯಮದ ದೃಷ್ಟಿಯಿಂದ, ಸಾರ್ವಜನಿಕ ಒಳಿತಿಗಾಗಿ ಮತ್ತು ಸಿಂಧುವಾದ ಕಾರಣಗಳಿಗಾಗಿ ಮಾತ್ರವೇ ರಾಜ್ಯ ಸರ್ಕಾರವು ಇಷ್ಟಾನುಸಾರ ಹಿಂಪಡೆಯುವ ಅಧಿಕಾರವನ್ನು ಚಲಾಯಿಸಬಹುದಾಗಿತ್ತು. ಹಾಗಾಗಿ, ಪ್ರಸ್ತುತ ಮೊಕದ್ದಮೆಯಲ್ಲಿ, ಪ್ರಶ್ನಿತ ಆದೇಶವನ್ನು ಯಾವುದೇ ಸಿಂಧುವಾದ ಕಾರಣಗಳಿಗಾಗಿ ಹೊರಡಿಸಲಾಗಿದೆ ಎ ಂ ಬ ನಿರ್ಣಯವನ್ನು ದಾಖಲಿಸುವುದು ಸಾಧ್ಯವಿಲ್ಲ. ಪ್ರಶ್ನಿತ ಆದೇಶವನ್ನು ಹೊರಡಿಸುವಾಗ, ಯಾವುದೇ ಸಿಂಧುವಾದ ಕಾರಣಗಳನ್ನು ದಾಖಲಿಸಲಾಗಿತ್ತು ಎಂದು ತೋರಿಸುವ ಸಮಕಾಲಿಕವಾದ ಯಾವುದೇ ಸಾಕ್ಷ್ಯವನ್ನು ಹಾಜರುಪಡಿಸದೆ ಇರುವುದರಿಂದ, ಅಫಿಡಾವಿಟ್ ಮೂಲಕ, ತರುವಾಯದ ಆಲೋಚನೆಯ ಮೂಲಕ ಕೆಲವು ಕಾರಣಗಳನ್ನು ಸಮರ್ಥಿಸಿಕೊಳ್ಳಬೇಕಿದೆ. ರಿಟ್ ಅರ್ಜಿ ಸಂಖ್ಯೆ: 326/2015 ರಲ್ಲಿ ಅರ್ಜಿದಾರರು, ಸದರಿ ನಿಗಮವು ಏಕೆ ನಷ್ಟದಲ್ಲಿತ್ತು ಎಂಬುದನ್ನು

ವಿವರಿಸಿ ಪ್ರತ್ಯುತ್ತರ ಸಲ್ಲಿಸಿದ್ದಾರೆ. ಆದುದರಿಂದ, ಪ್ರಶ್ನಿತ ಆದೇಶವನ್ನು ಸಿಂಧುವಾದ ಕಾರಣಗಳಿಗಾಗಿ ಮತ್ತು ಸಾರ್ವಜನಿಕ ಒಳಿತಿಗಾಗಿ ಹೊರಡಿಸಲಾಗಿತ್ತು ಎಂದು ತೋರಿಸುವ ಯಾವುದೇ ಸಾಕ್ಷ್ಯವು ದಾಖಲೆಯಲ್ಲಿ ಇಲ್ಲವೆಂಬ ಕಾರಣದಿಂದ ಅದನ್ನು ಸಮರ್ಥಿಸಲಾಗುವುದಿಲ್ಲ."

21. ವಿವಿಧ ವಾದಗಳನ್ನು ಮಂಡಿಸಲಾಗಿದೆಯಾದಾರೂ, ರಿಟ್ ಅರ್ಜಿಯನ್ನು ಕಂಪನಿಗಳ ಅಧಿನಿಯಮದ ಮತ್ತು ಸಂಘದ ನಿಯಮಾವಳಿಗಳ ಹಿನ್ನೆಲೆಯಲ್ಲಿ ಪರಿಗಣಿಸಬೇಕಾದ ಅಗತ್ಯವಿದೆ ಎಂಬುದು ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯವಾಗಿದೆ.

22. 4 ನೇ ಪ್ರತಿವಾದಿ ಕಂಪನಿಯು, ದಿನಾಂಕ: 30.04.2002 ರಂದು ನಿಗಮಿತವಾಗಿದೆ ಮತ್ತು ಕಂಪನಿಗಳ ನಿಬಂಧಕರು ನೀಡಿದ್ದರೆ ಸಂಯೋಜನಾ ಪ್ರಮಾಣಪತ್ರವನ್ನು ಹಾಗೂ ಸಂಘದ ವಿವರಣಪತ್ರ ಮತ್ತು ಸಂಘದ ನಿಯಮಾವಳಿಗಳನ್ನು ಈ ನ್ಯಾಯಾಲಯದ ಮುಂದೆ ಮಂಡಿಸಲಾಗಿದೆ. 74 (ಎ) ನಿಯಮದ ಅಡಿಯಲ್ಲಿ ನಿರ್ದೇಶಕರನ್ನು ನಾಮನಿರ್ದೇಶಿಸುವ ಮತ್ತು ನೇಮಕ ಮಾಡುವ ಹಕ್ಕು ಸರ್ಕಾರದಲ್ಲಿ ನಿಹಿತವಾಗಿದೆ ಎಂಬ ಸಂಗತಿಗೆ ಸಂಬಂಧಿಸಿದಂತೆ ಯಾವುದೇ ವಿವಾದವಿಲ್ಲ ಹಾಗೂ 74 ((ಎ) ಮತ್ತು (ಬಿ) ಅನುಚ್ಛೇದಗಳನ್ನು ಈ ಕೆಳಗಿನಂತೆ ಓದಲಾಗಿದೆ:

| | | |
|---|---|---|
| ನಿರ್ದೇಶಕ (ರ), ಅಧ್ಯಕ್ಷ, ಮತ್ತು ವ್ಯವಸ್ಥಾಪಕ ನಿರ್ದೇಶಕ, ವ್ಯವಸ್ಥಾಪಕ ನಿರ್ದೇಶಕ ಹಾಗೂ ಪೂರ್ಣಕಾಲಿಕ ನಿರ್ದೇಶಕರ ನೇಮಕಾತಿ ಮತ್ತು ಸಂಭಾವನೆ | 74. (ಎ) | ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಕರ್ನಾಟಕ ಸರ್ಕಾರವು ಮತ್ತು ಕೇಂದ್ರ ಸರ್ಕಾರವು ಅಥವಾ ಸರ್ಕಾರಿ ಕಂಪನಿಯು ಪೂರ್ಣವಾಗಿ ಮಾಲೀಕತ್ವ ಹೊಂದಿದ ಅಧೀನ ಸಂಸ್ಥೆಯು, ಕಂಪನಿಯ ಎಲ್ಲಾ ಸಂದಾಯಿತ ಷೇರು ಬಂಡವಾಳವನ್ನು ಹೊಂದಿರುವವರೆಗೆ, ಕರ್ನಾಟಕ ಸರ್ಕಾರವು, ಕಂಪನಿಯ ಎಲ್ಲಾ ನಿರ್ದೇಶಕರನ್ನು ನಾಮನಿರ್ದೇಶಿಸುವ ಮತ್ತು ನೇಮಕ ಮಾಡುವ ಹಾಗೂ ಅದರ ನಿರುಪಾಧಿಕ ವಿವೇಚನಾನುಸಾರ ಯಾವುದೇ ಸಮಯದಲ್ಲಿ ಹುದ್ದೆಯಿಂದ |

| | | |
|---|---|---|
| | | ನಿರ್ದೇಶಕನನ್ನು (ರನ್ನು) ತೆಗೆದುಹಾಕುವ ಮತ್ತು ಆತನ/ಅವರ ಸ್ಥಾನದಲ್ಲಿ (ಗಳಲ್ಲಿ) ಮತ್ತೊಬ್ಬನನ್ನು/ಇತರರನ್ನು ನೇಮಕ ಮಾಡುವ ಹಾಗೂ ಏನೇ ಆಗಲಿ ಯಾವುದೇ ಕಾರಣಕ್ಕಾಗಿ ಅಂಥ ನಿರ್ದೇಶಕನು/ನಿರ್ದೇಶಕರು ಪದಧಾರಣ ಮಾಡುವುದು ಕೊನೆಗೊಂಡ ಪರಿಣಾಮವಾಗಿ ಉದ್ಭವಿಸಬಹುದಾದಂಥ ಯಾವುದೇ ಖಾಲಿ ಸ್ಥಾನವನ್ನು ಗಳನ್ನು ಭರ್ತಿ ಮಾಡುವ ಹಕ್ಕನ್ನು ಹೊಂದಿರತಕ್ಕದ್ದು. |
| | (ಬಿ) | ಕರ್ನಾಟಕ ಸರ್ಕಾರವು ಮತ್ತು ಕೇಂದ್ರ ಸರ್ಕಾರವು ಅಥವಾ ಸರ್ಕಾರಿ ಕಂಪನಿಯು ಪೂರ್ಣವಾಗಿ ಮಾಲೀಕತ್ವ ಹೊಂದಿದ ಅಧೀನ ಸಂಸ್ಥೆಯು, ಕಂಪನಿಯ ಎಲ್ಲಾ ಸಂದಾಯಿತ ಷೇರು ಬಂಡವಾಳವನ್ನು ಹೊಂದಿರುವವರೆಗೆ, ಕರ್ನಾಟಕ ಸರ್ಕಾರವು, ನಿರ್ದೇಶಕರ ಮಂಡಳಿಯ ಅಧ್ಯಕ್ಷನ/ರ ಹುದ್ದೆಗೆ ಕಂಪನಿಯ ಒಬ್ಬ ಅಥವಾ ಹೆಚ್ಚು ಚ ನಿರ್ದೇಶಕರನ್ನು ಅಥವಾ ಕಂಪನಿಗೆ ವ್ಯವಸ್ಥಾಪಕ ನಿರ್ದೇಶಕ ಅಥವಾ |

| | | |
|---|---|---|
| | | ಪೂರ್ಣಕಾಲಿಕ ನಿರ್ದೇಶಕರನ/ರನ್ನು, ಅದು ಸೂಕ್ತವೆಂದು ಪದ್ಯಾಲೋಚಿಸ ಬಹುದಾದಂಥ ಅವಧಿಗೆ ಮತ್ತು ಅಂಥ ಸಂಭಾವನೆ ಮತ್ತು/ಅಥವಾ ಭತ್ಯೆಯ ಮೇಲೆ ನಾಮ ನಿರ್ದೇಶಿಸುವ ಮತ್ತು ನೇಮಕ ಮಾಡುವ ಹಾಗೂ ಯಾವುದೇ ಸಮಯದಲ್ಲಿ ಹುದ್ದೆಯಿಂದ ಆತನನ್ನು (ಅವರನ್ನು) ತೆಗೆದುಹಾಕುವ ಮತ್ತು ಆತನ/ಅವರ ಸ್ಥಾನದಲ್ಲಿ (ಗಳಲ್ಲಿ) ಮತ್ತೊಬ್ಬನನ್ನು/ಇತರರನ್ನು ನೇಮಕ ಮಾಡುವ ಹಕ್ಕನ್ನು ಹೊಂದಿರತಕ್ಕದ್ದು. |

23. 74 (ಎ) ಅನುಚ್ಛೇದವನ್ನು ಓದುವ ಮಾತ್ರದಿಂದಲೇ, ಅದು, ಸರ್ಕಾರಕ್ಕೆ ಮಂಡಳಿಯ ಎಲ್ಲಾ ನಿರ್ದೇಶಕರನ್ನು ನಾಮನಿರ್ದೇಶಿಸುವ ಮತ್ತು ನೇಮಕ ಮಾಡುವ ಹಕ್ಕನ್ನು ಹಾಗೂ ಅದರ ನಿರುಪಾಧಿಕ ವಿವೇಚನಾನುಸಾರ ಯಾವುದೇ ಸಮಯದಲ್ಲಿ ನಿರ್ದೇಶಕನನ್ನು ತೆಗೆದುಹಾಕುವ ಹಕ್ಕನ್ನು, ಅಷ್ಟೇ ಅಲ್ಲದೆ, ಪ್ರಸ್ತುತ ನಿರ್ದೇಶಕನ ಸ್ಥಾನಕ್ಕೆ ಬೇರೊಬ್ಬ ನಿರ್ದೇಶಕನ್ನು ನೇಮಕ ಮಾಡುವ ಅಥವಾ ತೆಗೆದುಹಾಕುವುದರಿಂದ ಉದ್ಭವಿಸುವ ಯಾವುದೇ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ಹಕ್ಕನ್ನು ಪ್ರದಾನ ಮಾಡಿದೆ ಎಂಬುದು ಸುಸ್ಪಷ್ಟ. 74 (ಬಿ) ಅನುಚ್ಛೇದವು ನಿರ್ದೇಶಕರ ಮಂಡಳಿಯ ಅಧ್ಯಕ್ಷನ ಅಥವಾ ವ್ಯವಸ್ಥಾಪಕ ನಿರ್ದೇಶಕನ ಅಥವಾ ಪೂರ್ಣಕಾಲಿಕ ನಿರ್ದೇಶಕನ ನೇಮಕಾತಿಗೆ ಹಾಗೂ ಆತನನ್ನು ಅವರನ್ನು ತೆಗೆದುಹಾಕುವ ಮತ್ತು ಅವರ ಸ್ಥಾನದಲ್ಲಿ ಮತ್ತೊಬ್ಬನನ್ನು/ಇತರರನ್ನು ನೇಮಕ ಮಾಡುವುದಕ್ಕೆ ಸಂಬಂಧಿಸಿದೆ.

24. ಪ್ರಸ್ತುತ ಮೊಕದ್ದಮೆಯು ನಾಮನಿರ್ದೇಶಿತ ನಿರ್ದೇಶಕರನ್ನು ಎಂದರೆ ಅರ್ಜಿದಾರರನ್ನು ತೆಗೆದುಹಾಕುವುದನ್ನು ಮತ್ತು ಮೂರನೇ ಪ್ರತಿವಾದಿಯನ್ನು ನಾಮನಿರ್ದೇಶಿತ ನಿರ್ದೇಶಕರನ್ನಾಗಿ

ನಾಮನಿರ್ದೇಶನ ಮತ್ತು ನೇಮಕಾತಿಯನ್ನು ಮಾಡಿರುವುದನ್ನು ಒಳಗೊಂಡಿದೆ. ಆದ್ದರಿಂದ, 74 (ಎ) ಅನುಚ್ಛೇದ ಮಾತ್ರವೇ ಪ್ರಸ್ತುತ ಮೊಕದ್ದಮೆಗೆ ಸಂಬಂಧಿಸಿದುದಾಗಿದೆ.

25. ಈ ಖಂಡವು ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು " 1 ಎಂಬ ಪದಪುಂಜದಿಂದ ಪ್ರಾರಂಭವಾಗುತ್ತದೆ. ಸಂಘದ ನಿಯಮಾವಳಿಗಳ ಮೊದಲ ಅಧ್ಯಾಯದ, “ ಅರ್ಥವಿವರಣೆ ” ಎಂಬ ಶೀರ್ಷಿಕೆಯಲ್ಲಿ “ ಅಧಿನಿಯಮ ” ಅಥವಾ “ ಸದರಿ ಅಧಿನಿಯಮ ” ಎಂಬ ಪದಗಳನ್ನು ಕಂಪನಿಗಳ ಅಧಿನಿಯಮವೆಂದು ಪರಿಭಾಷಿಸಲಾಗಿದ್ದು, ತತ್ಕಾಲದಲ್ಲಿ ಜಾರಿಯಲ್ಲಿರುವ ಅದರ ಯಾವುದೇ ಮರು ಅಧಿನಿಯಮಿತಿ ಅಥವಾ ಶಾಸನಾತ್ಮಕ ಮಾರ್ಪಾಡನ್ನು ಒಳಗೊಳ್ಳುತ್ತದೆ. 74 (ಎ) ನಿಯಮ ಮತ್ತು ಅಧಿನಿಯಮ ” ಅಥವಾ “ ಸದರಿ ಅಧಿನಿಯಮ ' ಪದಗಳ ಪರಿಭಾಷೆಯನ್ನು ಜೊತೆಯಾಗಿ ಓದಿದ ಮೇಲೆ ನಿರ್ದೇಶಕನನ್ನು ನಾಮನಿರ್ದೇಶಿಸಲು ಅಥವಾ ತೆಗೆದುಹಾಕಲು ರಾಜ್ಯ ಸರ್ಕಾರದಲ್ಲಿ ಅಧಿಕಾರ ನಿಹಿತವಾಗಿದೆ ಎಂಬುದನ್ನು ಸಂಘದ ನಿಯಮಾವಳಿಯು ಕಡ್ಡಾಯಪಡಿಸುತ್ತದೆಯಾದರೂ, ಸಂಘದ ನಿಯಮಾವಳಿಯ 74 ನೇ ಅನುಚ್ಛೇದವು ಸಹ, ಕಂಪನಿಗಳ ಅಧಿನಿಯಮಕ್ಕನುಗುಣವಾಗಿ ಮಾತ್ರವೇ ಅದನ್ನು ಚಲಾಯಿಸಬಹುದಾಗಿದೆ ಎಂಬುದನ್ನು ಕಡ್ಡಾಯಪಡಿಸುತ್ತದೆ ಎಂಬ ಅನಿವಾರ್ಯ ನಿರ್ಣಯಕ್ಕೆ ಬರಬೇಕಾಗುತ್ತದೆ. 74 (ಎ) ಅನುಚ್ಛೇದದ ಮತ್ತು “ ಅಧಿನಿಯಮ ” ಅಥವಾ “ ಸದರಿ ಅಧಿನಿಯಮ ” ಪದಗಳ ಪರಿಭಾಷೆಯನ್ನು ಒಟ್ಟಿಗೆ ಓದುವುದು, ಯಾವುದೇ ದ್ವಂದ್ವ ಅಥವಾ ಕುಟಿಲತಂತ್ರಗಳಿಗೆ ಅವಕಾಶ ನೀಡುವುದಿಲ್ಲ. ನಿಯಮದಲ್ಲಿ ಬಳಸಿದ " ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು " ಪದಪುಂಜವು, ರಾಜ್ಯ ಸರ್ಕಾರಕ್ಕೆ ಕಂಪನಿಗಳ ಅಧಿನಿಯಮಕ್ಕನುಗುಣವಾಗಿ ಮಾತ್ರವೇ ಅಧಿಕಾರ ಚಲಾಯಿಸುವ ಕರ್ತವ್ಯವನ್ನು ವಿಧಿಸುತ್ತದೆ. ಈ ಹಿನ್ನೆಲೆಯಲ್ಲಿ, ಕಂಪನಿಗಳ ಅಧಿನಿಯಮ, 2013 ರ 152 ನೇ ಪ್ರಕರಣದ ಉಪಬಂಧಗಳನ್ನು ಪರೀಶೀಲಿಸುವುದು ಅಗತ್ಯವಾಗಿದ್ದು, ಅದು ನಿರ್ದೇಶಕರ ನೇಮಕಾತಿ ಕುರಿತು ವ್ಯವಹರಿಸುತ್ತದೆ:

" (3) ಒಬ್ಬ ವ್ಯಕ್ತಿಗೆ 154 ನೇ ಪ್ರಕರಣದ ಅಡಿಯಲ್ಲಿ ನಿರ್ದೇಶಕನ ಗುರುತಿನ ಸಂಖ್ಯೆಯನ್ನು ವಿತರಿಸಿದ ಹೊರತು, ಆತನನ್ನು ಕಂಪನಿಯ ನಿರ್ದೇಶನನ್ನಾಗಿ ನೇಮಕ ಮಾಡತಕ್ಕದ್ದಲ್ಲ.

(5) ನಿರ್ದೇಶಕನಾಗಿ ನೇಮಕಗೊಂಡ ಒಬ್ಬ ವ್ಯಕ್ತಿಯು, ನಿರ್ದೇಶಕನಾಗಿ ಪದ ಧಾರಣ ಮಾಡಲು ತನ್ನ ಸಮ್ಮತಿಯನ್ನು ನೀಡಿದ ಮತ್ತು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಆತನ ನೇಮಕಾತಿಯ ಮೂವತ್ತು ದಿನಗಳ ಒಳಗಾಗಿ ನಿಬಂಧಕರಲ್ಲಿ ಅಂಥ ಸಮ್ಮತಿ ಪತ್ರವನ್ನು ಸಲ್ಲಿಸಿದ ಹೊರತು, ಆತನು ನಿರ್ದೇಶಕನಾಗಿ ಕಾರ್ಯನಿರ್ವಹಿಸತಕ್ಕದಲ್ಲ; ಪರಂತು, ಸರ್ವ ಸದಸ್ಯರ ಸಭೆಯಲ್ಲಿ ಸ್ವತಂತ್ರ ನಿರ್ದೇಶಕನ ನೇಮಕಾತಿಯ ಸಂದರ್ಭದಲ್ಲಿ, ಸರ್ವ ಸದಸ್ಯರ ಸಭೆಯ ನೋಟೀಸಿಗೆ ಲಗತ್ತಿಸಿದ ಅಂಥ ನೇಮಕಾತಿಗೆ ಸಂಬಂಧಿಸಿದ ವಿವರಣಾತ್ಮಕ ಹೇಳಿಕೆಯೊಂದಿಗೆ, ಮಂಡಳಿಯ ಅಭಿಪ್ರಾಯದಲ್ಲಿ ಆತನು ಅಂಥ ನೇಮಕಾತಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದಲ್ಲಿ ನಿರ್ದಿಷ್ಟ ಪಡಿಸಿದ ಷರತ್ತುಗಳನ್ನು ಈಡೇರಿಸಿದ್ದಾನೆ ಎಂಬ ಹೇಳಿಕೆಯನ್ನು ಸೇರಿಸತಕ್ಕದ್ದು. "

26. ಮೇಲಿನ ಉಪಬಂಧಗಳ ಓದುವಿಕೆಯಿಂದ ನೇರವಾಗಿ ತಿಳಿದುಬರುವ ಅಂಶವೆಂದರೆ, (3) ನೇ ಉಪ-ಪ್ರಕರಣದ ಹಿನ್ನೆಲೆಯಲ್ಲಿ, ಯಾರೇ ವ್ಯಕ್ತಿಯು 154 ನೇ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಿದಂತೆ ನಿರ್ದೇಶಕರ ಗುರುತಿನ ಸಂಖ್ಯೆಯನ್ನು ಆತನಿಗೆ ವಿತರಿಸಲಾಗಿದ್ದ ಹೊರತು, ಆತನನ್ನು ಕಂಪನಿಯ ನಿರ್ದೇಶಕನನ್ನಾಗಿ ನೇಮಕ ಮಾಡುವಂತಿಲ್ಲ ಎಂಬುದಾಗಿದೆ. ಆದ್ದರಿಂದ, ಅದು ನಿರ್ದೇಶಕನ ನೇಮಕಾತಿಗೆ ಮೊದಲಿನ ನಿರ್ಬಂಧವನ್ನು ಅಥವಾ ಪೂರ್ವಾನುಪಾಲನೆಯನ್ನು ವಿಧಿಸುತ್ತದೆ ಎಂದು ನಿಸ್ಸಂದೇಹವಾಗಿ ತೀರ್ಮಾನಿಸಬಹುದಾಗಿದೆ. 5 ನೇ ಉಪ-ಪ್ರಕರಣವು, ನಿರ್ದೇಶಕನಾಗಿ ನೇಮಕಗೊಂಡ ವ್ಯಕ್ತಿಯು, ನಿರ್ದೇಶಕನ ಹುದ್ದೆ ಧಾರಣ ಮಾಡಲು ತನ್ನ ಸಮ್ಮತಿಯನ್ನು ನೀಡಿದ ಮತ್ತು ಅಂಥ ಸಮ್ಮತಿಯನ್ನು 30 ದಿನಗಳ ಒಳಗಾಗಿ ನಿಬಂಧಕರಿಗೆ ಸಲ್ಲಿಸಿದ ಹೊರತು, ಆತನು ನಿರ್ದೇಶಕನಾಗಿ ಕಾರನಿರ್ವಹಿಸತಕ್ಕದ್ದಲ್ಲವೆಂಬುದನ್ನು ಕಡ್ಡಾಯಪಡಿಸುತ್ತದೆ. ಇದು ಹುದ್ದೆಯ ನೇಮಕಾತಿಯ ಸಂಗತಿಯಾಗಿದ್ದರೂ, ಕಡ್ಡಾಯ ಅನುಪಾಲನೆಯಾಗಿದೆ. 154 ನೇ ಪ್ರಕರಣವು ಡಿಐಎನ್ ಸಂಖ್ಯೆಯ ವಿತರಣೆ ಕುರಿತು ವ್ಯವಹರಿಸುತ್ತದೆ. 152 ನೇ ಪ್ರಕರಣದ ಯಾವುದೇ ಉಲ್ಲಂಘನೆಯು, ಆರು ತಿಂಗಳುಗಳವರೆಗಿನ ಅವಧಿಯ ಸೆರೆವಾಸ ಅಥವಾ 50,000/-ರೂ.ಗಳವರೆಗೆ ವಿಸ್ತರಿಸಬಹುದಾಗಿರುವ ಜುಲ್ಮಾನೆಯಿಂದ ದಂಡನೀಯ ಅಪರಾಧವೆಂದು 159 ನೇ ಪ್ರಕರಣವು ನಿರೂಪಿಸುತ್ತದೆ.

27. 161 ನೇ ಪ್ರಕರಣವು, ಹೆಚ್ಚುವರಿ ನಿರ್ದೇಶಕರ, ಪರಾಯ ನಿರ್ದೇಶಕರ ಮತ್ತು ನಾಮನಿರ್ದೇಶಿತ ನಿರ್ದೇಶಕರ ನೇಮಕಾತಿ ಕುರಿತು ವ್ಯವಹರಿಸುತ್ತದೆ. (3) ನೇ ಉಪ-ಪ್ರಕರಣವು ಉಪಬಂಧಗಳ ಸುಸಂಗತೆಯಾಗಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

" (3) ಕಂಪನಿಯ ನಿಯಮಾವಳಿಗಳಿಗೆ ಒಳಪಟ್ಟು, ಮಂಡಳಿಯು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗನುಸಾರವಾಗಿ ಅಥವಾ ಯಾವುದೇ ಒಪ್ಪಂದ ಮೇರೆಗೆ ಯಾವುದೇ ಸಂಸ್ಥೆ ಅಥವಾ ಸರ್ಕಾರಿ ಕಂಪನಿಯಲ್ಲಿ ಷೇರುಧಾರಣೆ ಮಾಡಿರುವ ಕಾರಣದಿಂದ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ನಾಮನಿರ್ದೇಶಿಸಿದ ಯಾರೇ ವ್ಯಕ್ತಿಯನ್ನು ನಿರ್ದೇಶಕನನ್ನಾಗಿ ನೇಮಕ ಮಾಡಬಹುದು "

28. ವಾದಗಳು ನಡೆಯುತ್ತಿದ್ದಾಗ, ಪ್ರತಿವಾದಿಗಳ ಪೈಕಿ ಯಾರೇ ಆಗಲಿ, ಮೂರನೇ ಪ್ರತಿವಾದಿಯ ನೇಮಕಾತಿಯನ್ನು ಯಾವ ಉಪಬಂಧದ ಅಡಿಯಲ್ಲಿ ಮಾಡಲಾಗಿದೆ ಎಂಬುದನ್ನು ವಿವರಿಸಿರುವುದಿಲ್ಲ. ಆದರೆ, 74 (ಎ) ನಿಯಮದಲ್ಲಿ ಬಳಸಿದ ಪರಿಭಾಷೆಯನ್ನು, ಎಂದರೆ ನಾಮನಿರ್ದೇಶನ ಮತ್ತು ನೇಮಕ ” ಎಂಬ ಪದಗಳನ್ನು ಗಮನದಲ್ಲಿರಿಸಿಕೊಂಡು ಮತ್ತು ಅವುಗಳನ್ನು 161 ನೇ ಪ್ರಕರಣದ (3) ನೇ ಉಪ-ಪ್ರಕರಣದ ಜೊತೆಯಲ್ಲಿ ಓದಿದರೆ, ಅರ್ಜಿದಾರರು ಮತ್ತು ಮೂರನೇ ಪ್ರತಿವಾದಿಗಳು ನಾಮನಿರ್ದೇಶಿತ ನಿರ್ದೇಶಕರು ಮಾತ್ರ ಆಗಿರುವರೆಂಬ ಏಕೈಕ ತೀರ್ಮಾನಕ್ಕೆ ಬರಬಹುದಾಗಿದೆ. ಎರಡನೆಯದಾಗಿ, (3) ನೇ ಉಪ-ಪ್ರಕರಣದ ಪರಿಭಾಷೆಯು ಯಾವ ಸಂಶಯಕ್ಕೂ ಎಡೆ ಮಾಡಿಕೊಡುವುದಿಲ್ಲ ಮತ್ತು ಅಂಥ ನಾಮನಿದೇಶಿತ ನಿರ್ದೇಶಕನನ್ನು ಸಹ ಮಂಡಳಿಯು ಮಾತ್ರವೇ ನೇಮಕ ಮಾಡಬಹುದಾಗಿದೆ ಎಂಬುದನ್ನು ಅತ್ಯಂತ ಸ್ಪಷ್ಟವಾಗಿ ಹೇಳುತ್ತದೆ. " ಕಂಪನಿಯ

ನಿಯಮಾವಳಿಗಳಿಗೆ ಒಳಪಟ್ಟು, ಮಂಡಳಿಯು ಯಾರೇ ವ್ಯಕ್ತಿಯನ್ನು ನಾಮನಿರ್ದೇಶಿತ ನಿರ್ದೇಶಕನ್ನಾಗಿ ನೇಮಕ ಮಾಡಬಹುದು " ಎಂಬ ಪದಪುಂಜವು, ಯಾವುದೇ ಸಂಧಿಗ್ಧಾರ್ಥಕ್ಕೆ ಅವಕಾಶ ನೀಡುವುದಿಲ್ಲ. ಉಪಬಂಧದಲ್ಲಿ ಬಳಸಿರುವ ಪರಿಭಾಷೆಯು ಸ್ಪಷ್ಟವಾಗಿದೆ ಮತ್ತು ನಿಶ್ಚಿತವಾಗಿದೆ. ಯಾವುದೇ ಸಂಸ್ಥೆಯು ಅಥವಾ ಸರ್ಕಾರವು ನಾಮನಿರ್ದೇಶಿಸಿದ ಅಂಥ ಪ್ರತಿಯೊಬ್ಬ ವ್ಯಕ್ತಿಯನ್ನು, ಮಂಡಳಿಯು ಮಾತ್ರವೇ ನೇಮಕ ಮಾಡಬಹುದು ಹಾಗೂ ಮಂಡಳಿಯ ಎಲ್ಲಾ ನಿರ್ಣಯಗಳು, ಮಂಡಳಿಯ ಸಭೆಯಲ್ಲಿ ಅಂಗೀಕರಿಸಿದ ಗೊತ್ತುವಳಿಗಳ ಮೂಲಕವಾಗಿರುತ್ತವೆ.

29. ಇದು ಅರ್ಥವಿವರಣೆಯಾಗಿದ್ದರೆ, ಆಗ, ನಿರ್ದೇಶಕರನ್ನಾಗಿ ಯಾರೇ ವ್ಯಕ್ತಿಯನ್ನು ನಾಮನಿರ್ದೇಶಿಸುವ ಮತ್ತು ನೇಮಕ ಮಾಡುವ ಮೂಲಕ ನಾಮನಿರ್ದೇಶನದ/ನೇಮಕಾತಿಯ ಯಾವುದೇ ಆದೇಶವು, ಮಂಡಳಿಯು ಗೊತ್ತುವಳಿಯನ್ನು ಅಂಗೀಕರಿಸಿದ ನಂತರ ಮಾತ್ರವೇ ನಿರ್ದಿಷ್ಟ ರೂಪ ತಾಳುವುದು ಮತ್ತು ಕಾರ್ಯರೂಪಕ್ಕೆ ಬರುತ್ತದೆ ಯಾವುದೇ ಇತರ ಅರ್ಥವಿವರಣೆಯು 161 ನೇ ಪ್ರಕರಣದ ಉಪಬಂಧಗಳಿಗೆ ತದ್ವಿರುದ್ಧವಾಗಿರುವವು.

30. ನಿರ್ದೇಶಕರ ನೇಮಕಾತಿಗಳಿಗೆ ಮತ್ತು ಅರ್ಹತೆಗಳಿಗೆ ಸಂಬಂಧಿಸಿದಂತೆ XI ನೇ ಅಧ್ಯಾಯದ ಅಡಿಯಲ್ಲಿನ ಅಧಿನಿಯಮದಲ್ಲಿ ಉಪಬಂಧ ಕಲ್ಪಿಸಲಾಗಿದೆ. 152 ನೇ, 154 ನೇ ಮತ್ತು 161 ನೇ ಪ್ರಕರಣಗಳು ಅದೇ ಅಧ್ಯಾಯದಲ್ಲಿ ಬರುತ್ತಿದ್ದು, ಅವೆಲ್ಲವೂ ನಿರ್ದೇಶಕರ ನೇಮಕಾತಿಗೆ ಸಂಬಂಧಿಸಿದವುಗಳಾಗಿವೆ. ಹಾಗಿದ್ದರೆ, 152 ನೇ ಪ್ರಕರಣದ (3) ನೇ ಉಪ-ಪ್ರಕರಣವು ಸಹ ಪರಿಗಣನೆಗೆ ಬರುತ್ತದೆ. ಒಬ್ಬ ವ್ಯಕ್ತಿಯು ನೇಮಕಾತಿ ಮಾಡಬೇಕೆಂದು ಯಾವ ಉಪಬಂಧದಡಿ ಕೋರುವನೋ ಆ ಉಪಬಂಧದಲ್ಲಿ ಏನೇ ಹೇಳಿದ್ದರೂ, 154 ನೇ ಪ್ರಕರಣದ ಅಡಿಯಲ್ಲಿ ಕಡ್ಡಾಯಪಡಿಸಿರುವಂತೆ ಡಿಐಎನ್ ಸಂಖ್ಯೆಯನ್ನು ಸದರಿ ವ್ಯಕ್ತಿಗೆ ವಿತರಿಸಿದ ಹೊರತು, ಆತನನ್ನು ನೇಮಕ ಮಾಡಲಾಗುವುದಿಲ್ಲ.

31. ಇದು ಅಧಿನಿಯಮದಲ್ಲಿನ ಕಡ್ಡಾಯ ನಿಯಮವಾಗಿದ್ದರೆ, ಆಗ ಮೂರನೇ ಪ್ರತಿವಾದಿಗೆ ಡಿಐಎನ್ ಸಂಖ್ಯೆಯನ್ನು ವಿತರಿಸದೆ ಅಥವಾ 4 ನೇ ಪ್ರತಿವಾದಿಯ ಮಡಳಿಯು ನಿರ್ದೇಶಕರನ್ನಾಗಿ ಅವರನ್ನು ನೇಮಕ ಮಾಡುವ ಸಂಬಂಧದಲ್ಲಿ ಗೊತ್ತುವಳಿಯನ್ನು ಅಂಗೀಕರಿಸದೆ ನಿರ್ದೇಶಕರನ್ನಾಗಿ ನೇಮಕ ಮಾಡಲಾಗುವುದಿಲ್ಲ. ಒಪ್ಪಿಕೊಂಡಿರುವಂತೆ, ಮೂರನೇ ಪ್ರತಿವಾದಿಯನ್ನು ನೇಮಕ ಮಾಡುವ ಮತ್ತು ಅರ್ಜಿದಾರರನ್ನು ತೆಗೆದು ಹಾಕುವ ಗೊತ್ತುವಳಿಯನ್ನು ಮಂಡಳಿಯು ದಿನಾಂಕ: 07.08.2019 ರಂದು ನಡೆದ 98 ನೇ ಸಭೆಯಲ್ಲಿ ಅಂಗೀಕರಿಸಿತ್ತು. ನ್ಯಾಯವಾದಿಗಳು ಮಾಡಿಕೊಂಡ ನಿವೇದನೆಗಳಿಂದ ಡಿಐಎನ್ ಸಂಖ್ಯೆಯನ್ನು ವಿತರಿಸಲಾಗಿದ್ದ ದಿನಾಂಕಕ್ಕೆ ಸಂಬಂಧಿಸಿದ ವಿವರಗಳು ತಿಳಿದುಬಂದಿರುವುದಿಲ್ಲ. ಗೊತ್ತುವಳಿಯನ್ನು ಅಂಗೀಕರಿಸುವ ಮೊದಲೇ ಡಿಐಎನ್ ಸಂಖ್ಯೆಯ ವಿತರಣೆ ಮಾಡಲಾಗಿತ್ತು ಎಂದು ವಾದದ ಸಲುವಾಗಿ ಊಹಿಸಿದರೂ ಸಹ, ಅರ್ಜಿದಾರರನ್ನು ತೆಗೆದುಹಾಕಿ, ಮೂರನೇ ಪ್ರತಿವಾದಿಗಳನ್ನು ನಿರ್ದೇಶಕರನ್ನಾಗಿ ನೇಮಕ ಮಾಡಿದ ದಿನಾಂಕ: 07.08.2019 ಆಗಿದೆ. ಹಾಗಾಗಿ, ದಿನಾಂಕ: 07.08.2019 ರಂದು ನಡೆದ 98 ನೇ ಸಭೆಯಲ್ಲಿ ಅಂಗೀಕರಿಸಿದ

ಒಂದೇ ಗೊತ್ತುವಳಿಯ ಮೂಲಕ ಅರ್ಜಿದಾರರನ್ನು ತೆಗೆದುಹಾಕಿ, ಮೂರನೇ ಪ್ರತಿವಾದಿಗಳನ್ನು ನೇಮಕ ಮಾಡಲಾಗಿದೆ. ಆದರೆ, ವಾದಗಳನ್ನು ಮಂಡಿಸುವಾಗ ನ್ಯಾಯಾಲಯಕ್ಕೆ ಕೆಲವು ದಸ್ತಾವೇಜುಗಳನ್ನು ಹಸ್ತಾಂತರಿಸಲಾಗಿದ್ದು, ಅವು, ಡಿಐಎನ್ ಸಂಖ್ಯೆಯನ್ನು ದಿನಾಂಕ: 05.09.2018 ರಂದು ಅರ್ಜಿದಾರರಿಗೆ ವಿತರಿಸಲಾಗಿತ್ತು ಮತ್ತು ಆ ತರುವಾಯ ಅರ್ಜಿದಾರರನ್ನು ದಿನಾಂಕ: 18.09.2018 ರಂದು ನಡೆದ 91 ನೇ ಸಭೆಯಲ್ಲಿ ಮಂಡಳಿಯು ನೇಮಕ ಮಾಡಿತ್ತು ಎಂಬುದನ್ನು ಬಹಿರಂಗಪಡಿಸುತ್ತವೆ. ಸದರಿ ದಸ್ತಾವೇಜುಗಳು, 4 ನೇ ಪ್ರತಿವಾದಿ ಮಂಡಳಿಯ ತಿಳುವಳಿಕೆಗೂ ಸಹ ನಿರ್ದೇಶಕರನ್ನು ನೇಮಕ ಮಾಡುವ ಗೊತ್ತುವಳಿಯನ್ನು ಅಂಗೀಕರಿಸುವ ಮುಂಚೆ ಡಿಐಎನ್ ಸಂಖ್ಯೆಯನ್ನು ಪಡೆಯಬೇಕಿತ್ತು ಎಂಬುದನ್ನು ತೀರ್ಮಾನಿಸುವ ಪರಿಮಿತ ಉದ್ದೇಶಕ್ಕೆ ಸಂಬಂಧಿಸಿವೆ.

32. ನಿರ್ದೇಶಕನನ್ನು ತೆಗೆದುಹಾಕುವ ಪ್ರಕ್ರಿಯೆಯನ್ನು 169 ನೇ ಪ್ರಕರಣದ ಅಡಿಯಲ್ಲಿ ಉಪಬಂಧಸಲಾಗಿದೆ. ನಿರ್ದೇಶಕನ ಹುದ್ದೆಯನ್ನು ತೆರವುಗೊಳಿಸುವ ವಿಧಾನವನ್ನು 167 ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾಗಿದೆ ಮತ್ತು ಅಧಿನಿಯಮದ ಅಡಿಯಲ್ಲಿ ನಿರ್ದೇಶಕನ ರಾಜಿನಾಮೆ ಸಂಬಂಧದ ಉಪಬಂಧವನ್ನು 168 ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾಗಿದೆ.

33. ಮೇಲಿನ ಚರ್ಚೆಯಿಂದ, ಮೂರನೇ ಪ್ರತಿವಾದಿಗಳ ನೇಮಕಾತಿಯು ದಿನಾಂಕ: 07.08.2019 ರಂದು ಮಂಡಳಿಯು ಗೊತ್ತುವಳಿಯನ್ನು ಅಂಗೀಕರಿಸಿದಾಗಿನಿಂದ ಮಾತ್ರವೇ ಕಾರ್ಯಗತಗೊಳ್ಳಲು ಸಾಧ್ಯವೆಂಬುದು ಸ್ಪಷ್ಟವಾಗುತ್ತದೆ. ಈ ನ್ಯಾಯಾಲಯವು, ನಾಮನಿರ್ದೇಶಿತಗೊಂಡ ನಿರ್ದೇಶಕನ ನೇಮಕಾತಿಗೆ ಉಪಬಂಧ ಕಲ್ಪಿಸಿರುವ 161 ನೇ ಪ್ರಕರಣದ (3) ನೇ ಉಪ-ಪ್ರಕರಣದ ಉಪಬಂಧಗಳ ಹಿನ್ನೆಲೆಯಲ್ಲಿ ಹಾಗೆ ಮಾತ್ರ ನಿರ್ಣಯಿಸಲು ಸಾಧ್ಯ. ಆದ್ದರಿಂದ, 4 ನೇ ಪ್ರತಿವಾದಿಯ ಮಂಡಳಿಯಲ್ಲಿನ ನಿರ್ದೇಶಕ ಹುದ್ದೆಯನ್ನು ಧಾರಣ ಮಾಡುವ ಹಕ್ಕು, ದಿನಾಂಕ: 07.08.2019 ರಂದು ನಡೆದ ಮಂಡಳಿಯ 98 ನೇ ಸಭೆಯಲ್ಲಿ ಮಧ್ಯಾಹ್ನ 3.00 ಗಂಟೆಗೆ ಗೊತ್ತುವಳಿಯನ್ನು ಅಂಗೀಕರಿಸಿರುವುದರ ಆಧಾರದ ಮೇಲೆ ಮೂರನೇ ಪ್ರತಿವಾದಿಯ ಸಂಬಂಧದಲ್ಲಿ ಖಚಿತ ರೂಪ ತಾಳಿದೆ. ಆದ್ದರಿಂದ, ಮೂರನೇ ಪ್ರತಿವಾದಿಯು ದಿನಾಂಕ: 23.07.2019 ರಂದು ಪ್ರಭಾರ ವಹಿಸಿಕೊಂಡರು ಮತ್ತು ಸಭೆಗಳಲ್ಲಿ ಸಹ ಭಾಗವಹಿಸಿದರು ಎಂಬ ವಾದವು, ಅವರ ಭಾಗವಹಿಸುವಿಕೆಯನ್ನು ಕಾನೂನಿನಲ್ಲಿ ತಪ್ಪು ಕಲ್ಪನೆ ಎಂಬುದಾಗಿ ಅರ್ಥೈಸಿರುವುದರಿಂದ ಕಾರ್ಯಗತಗೊಳ್ಳುವುದಿಲ್ಲ.

34. ನಿರ್ದೇಶಕರ ನೇಮಕಾತಿ ಮತ್ತು ತೆಗೆದುಹಾಕುವ ವಿಷಯದಲ್ಲಿ 4 ನೇ ಪ್ರತಿವಾದಿಯು ನಿರ್ದಿಷ್ಟ ಪದ್ಧತಿ ಮತ್ತು ಪ್ರಕ್ರಿಯೆಯನ್ನು ಅಳವಡಿಸಿಕೊಂಡಿದ್ದರು ಎಂಬ ವಾದವನ್ನು ಮತ್ತು ಸದರಿ ಪದ್ಧತಿಯು ಅಧಿನಿಯಮದ ಉಪಬಂಧಗಳನ್ನು ಮೀರಿ ಉತ್ತಮವಾಗಿದೆ ಎಂದು ಊಹಿಸುವುದನ್ನು ನಿರ್ದಿಷ್ಟ ರೀತಿಯಲ್ಲಿ ಚಲಾಯಿಸಬೇಕೆಂದು ಪ್ರಾಧಿಕಾರದಲ್ಲಿ ಕೆಲವು ಅಧಿಕಾರಗಳನ್ನು ಒಂದು ಶಾಸನವು ನಿಹಿತಗೊಳಿಸಿದಾಗ, ಆಗ ಸದರಿ ಪ್ರಾಧಿಕಾರವು ಆ ಶಾಸನದಲ್ಲಿ ಉಪಬಂಧಿಸಿದಂಥ ರೀತಿಯಲ್ಲಿ ಮಾತ್ರವೇ ಚಲಾಯಿಸಬೇಕೆಂದು ಕಡ್ಡಾಯಪಡಿಸಿರುವ ಕಾನೂನಿನ ಇತ್ಯರ್ಥಗೊಂಡ ತತ್ವದ ಹಿನ್ನೆಲೆಯಲ್ಲಿ, ಸಮ್ಮತಿಸಲಾಗುವುದಿಲ್ಲ. ಕ್ಯಾಪ್ಟನ್ ಸುಬೇ ಸಿಂಗ್ ಮತ್ತು ಇತರರು ವಿರುದ್ಧ ದೆಹಲಿ

ಲೆಫ್ಟಿನೆಂಟ್ ಗವರ್ನರ್ ಮತ್ತು ಇತರರು . (2004) 6 ಎಸ್‌ಸಿಸಿ 440 ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪೂರ್ಣ ಪೀಠವು, ರಲ್ಲಿ ಚ ವರದಿಯಾದ ಅಂಜುಮ್ ಎ ೦ ಹೆಚ್ ಫಸ್ವಾಲ್ 2002 1 ಎಸ್‌ಸಿಸಿ 633 ಮೊಕದ್ದಮೆಯ 29 ನೇ ಕಂಡಿಕೆಯಲ್ಲಿನ ಸಾಂವಿಧಾನಿಕ ಪೀಠದ ಘೋಷಣೆಯನ್ನು ಅವಲಂಬಿಸಿದೆ ಹಾಗೂ ವರದಿಯಾದ ಧನಂಜಯ ರೆಡ್ಡಿ –ವಿರುದ್ಧ ಕರ್ನಾಟಕ ರಾಜ್ಯ 19 ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯಗಳನ್ನು ಪುನರುಚ್ಚರಿಸಿದ್ದು, ಅದರ 9 ನೇ ಪುಟದ 29 ನೇ ಕಂಡಿಕೆಯನ್ನು ಈ ಕೆಳಗಿನಂತೆ ಓದಲಾಗಿದೆ:

" 29, ಅಂಜುಮ್ ಎಂ.ಹೆಚ್. ಫಸ್ವಾಲ್ ಮೊಕದ್ದಮೆಯಲ್ಲಿ, ಈ ನ್ಯಾಯಾಲಯದ ಸಾಂವಿಧಾನಿಕ ಪೀಠವು, ನಿರ್ದಿಷ್ಟ ರೀತಿಯಲ್ಲಿ ಚಲಾಯಿಸಬೇಕೆಂದು ಒಂದು ಪ್ರಾಧಿಕಾರದಲ್ಲಿ ಕೆಲವು ಅಧಿಕಾರಗಳನ್ನು ರಾಜ್ಯವು ನಿಹಿತಗೊಳಿಸಿದಾಗ, ಸದರಿ ಪ್ರಾಧಿಕಾರವು, ಆ ಶಾಸನದಲ್ಲಿ ಉಪಬಂಧಿಸಿದಂಥ ರೀತಿಯಲ್ಲಿ ಮಾತ್ರವೇ ಅದನ್ನು ಚಲಾಯಿಸಬೇಕೆಂಬ ಸಾಮಾನ್ಯ ನಿಯಮವನ್ನು ಮರು-ಸ್ಥಿರೀಕರಿಸಿದೆ. (ಈ ಸಂಬಂಧದಲ್ಲಿ ಧನಂಜಯ ರೆಡ್ಡಿ ವಿರುದ್ಧ ಕರ್ನಾಟಕ ರಾಜ್ಯ 2001 4 ಎಸ್ ಸಿಸಿ ಮೊಕದ್ದಮೆಯನ್ನು ಸಹ ಗಮನಿಸಿ) ಅನುಮತಿಗೆ ಸಂಬಂಧಿಸಿದ ಷರತ್ತುಗಳ ವ್ಯತ್ಯಾಸಕ್ಕೆ ಸ ೦ ಬ ೦ ಧಿಸಿದ ನಿಯಮಗಳಿಗನುಸಾರವಾಗಿ ಪ್ರಾಧಿಕಾರವು ಕಾರ್ಯನಿರ್ವಹಿಸುವುದನ್ನು ಪ್ರಶ್ನಿತ ಶಾಸನವು ಅಗತ್ಯಪಡಿಸುತ್ತದೆ. ನಮ್ಮ ಅಭಿಪ್ರಾಯದಲ್ಲಿ, 67 (1) (ಡಿ) ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವ ಮೂಲಕ ಅದರ (I) ನೇ ಉಪ ಖಂಡದೊಂದಿಗೆ ಓದಲಾದ ಈ ಷರತ್ತುಗಳನ್ನು ಬದಲಿಸಲು ತಾತ್ಪರ್ಯವಾಗುವಂತೆ ರಾಜ್ಯ ಸರ್ಕಾರಕ್ಕೆ ಅನುಮತಿಸಲಾಗುವುದಿಲ್ಲ. "

35. ಧನಂಜಯ ರೆಡ್ಡಿ ವಿರುದ್ಧ ಕರ್ನಾಟಕ ರಾಜ್ಯ ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಸಂಬಂಧದಲ್ಲಿ 23 ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

" ನಿರ್ದಿಷ್ಟ ರೀತಿಯಲ್ಲಿ ನಿರ್ದಿಷ್ಟ ಕೆಲಸವನ್ನು ಮಾಡಲು ಅಧಿಕಾರವನ್ನು ನೀಡಿದಲ್ಲಿ, ಆ ಕೆಲಸವನ್ನು ಆ ರೀತಿಯಲ್ಲಿ ಮಾಡಬೇಕೇ ಹೊರತು ಮತ್ತಾವುದೇ ರೀತಿಯಲ್ಲಿ ಅಲ್ಲವೆಂಬುದು ಇತ್ಯರ್ಥವಾದ ಕಾನೂನು ನಿಯಮವಾಗಿದೆ. ಈ ನ್ಯಾಯಾಲಯವು ಉತ್ತರ ಪ್ರದೇಶ-ವಿರುದ್ಧ ಸಿಂಘಾರ ಸಿಂಗ್ (ಎಐಆರ್ ಪುಟ 361 ಕಂಡಿಕೆ 8) ಮೊಕದ್ದಮೆಯಲ್ಲಿ ಹೀಗೆ ಅಭಿಪ್ರಾಯಪಟ್ಟಿದೆ:

6 “ ಆದುದರಿಂದ, ದಂಡಾಧಿಕಾರಿಯು, ತನಿಖಾವಧಿಯಲ್ಲಿ 164 ನೇ ಪ್ರಕರಣದಲ್ಲಿ ವಿಧಿಸಲಾದ ರೀತಿಯಲ್ಲಿ ಹೊರತು ಬೇರೆ ರೀತಿಯಲ್ಲಿ ತಪ್ಪೊಪ್ಪಿಗೆಯನ್ನು ದಾಖಲಿಸಲಾಗುವುದಿಲ್ಲ. ಖಂಡಿತವಾಗಿಯೂ, ವಿಧಿಸಲಾದ ರೀತಿಯಲ್ಲಿ ತನ್ನೊಪ್ಪಿಗೆಯನ್ನು ದಾಖಲಿಸುವ ಮೂಲಕ ಅದನ್ನು ಸಾಬೀತುಪಡಿಸುವ ಹಾಗೆ ತನ್ನೊಪ್ಪಿಗೆಯನ್ನು ದಾಖಲಿಸುವ ಅಧಿಕಾರವನ್ನು ನೀಡಲಾಗಿತ್ತು. "

36. ಮೇಲಿನ ಕಂಡಿಕೆಗಳ ಓದುವಿಕೆಯಿಂದ, ಈ ಕಾನೂನು ನಿಯಮವು ಸುಸ್ಥಾಪಿತ ನಿಯಮವಾಗಿದೆ ಮತ್ತು ಈ ನಿಯಮದ ಯಾವುದೇ ಉಲ್ಲಂಘನೆಯು ಸ್ವಯಂ ಆಗಿ ಕ್ರಮವನ್ನು ಅನೂರ್ಜಿತಗೊಳಿಸುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ, ದಿನಾಂಕ: 23.07.2019 ರಿಂದ

ಜಾರಿಗೆ ಬರುವಂತೆ ಹುದ್ದೆ ವಹಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಮೂರನೇ ಪ್ರತಿವಾದಿಯ ಕ್ಲೇಮು ಇದರಿಂದಲೇ ಕಾನೂನುಬಾಹಿರವಾಗಿದೆ ಮತ್ತು ಇದಕ್ಕೆ ತದ್ವಿರುದ್ಧವಾದ ಯಾವುದೇ ವಾದವನ್ನು, ಮೇಲೆ ಹೇಳಿದ ಕಂಪನಿಗಳ ಅಧಿನಿಯಮದ ಉಪಬಂಧಗಳ ಹಿನ್ನೆಲೆಯಲ್ಲಿ ಅನುಮತಿಸಲಾಗುವುದಿಲ್ಲ. ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ನಾಮನಿರ್ದೇಶಿಸಲು ಮತ್ತು ನೇಮಕ ಮಾಡಲು ಸರ್ಕಾರವನ್ನು ಶಕ್ತಗೊಳಿಸುವ ಸಂಘಗಳ ನಿಯಮಾವಳಿಗಳು, ವಾದವನ್ನು ಹೂಡುವುದನ್ನು ಬಿಟ್ಟು ಪ್ರತಿವಾದಿಗಳಿಗೆ ಬೇರೆ ಯಾವುದೇ ಅವಕಾಶವನ್ನು ನೀಡುವುದಿಲ್ಲ. ಕಂಪನಿಗಳ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ನೇಮಕಾತಿ ಅಥವಾ ತೆಗೆದುಹಾಕುವುದನ್ನು ಹೊರತುಪಡಿಸಿ, ಕಂಪನಿಗಳ ಅಧಿನಿಯಮದ ಉಪಬಂಧಗಳನ್ನು ಅನುಪಾಲಿಸದಿರುವ ಸರ್ಕಾರದ ಯಾವುದೇ ಕ್ರಮವು ನಿರರ್ಥಕವಾಗುವುದು ಎಂಬುದನ್ನು ಸಂಘದ ನಿಯಮಾವಳಿಗಳು ಕಡ್ಡಾಯಪಡಿಸುತ್ತವೆ. ಆದ್ದರಿಂದ, ನಿರ್ದೇಶಕರಾಗಿ ಮೂರನೇ ಪ್ರತಿವಾದಿಯ ನೇಮಕಾತಿಯು, ದಿನಾಂಕ: 23.07.2019 ರಿಂದ ಜಾರಿಗೆ ಬರುವಂತೆ ಪರಿಣಾಮಕಾರಿಯಾಗುತ್ತದೆ ಎಂಬ ವಾದವನ್ನು ತಳ್ಳಿ ಹಾಕಬೇಕಾಗುತ್ತದೆ ಮತ್ತು ತದನುಸಾರವಾಗಿ ತಳ್ಳಿಹಾಕಲಾಗಿದೆ.

37. ವಾಸ್ತವವಾಗಿ, ಅಧಿನಿಯಮದ ಉಪಬಂಧಗಳ ಹಿನ್ನೆಲೆಯಲ್ಲಿ, ಮೂರನೇ ಪ್ರತಿವಾದಿಗಳ ಕ್ಲೇಮು, ನಿರ್ದೇಶಕರ ಗುರುತಿನ ಸಂಖ್ಯೆ (ಡಿಐಎನ್) ಹಂಚಿಕೆಯಾಗದೆ ನಿರ್ದೇಶಕರಾಗಿ ಕಾರನಿರ್ವಹಿಸುವುದರಿಂದ ಯಾರೇ ವ್ಯಕ್ತಿಯನ್ನು ನಿಷೇಧಿಸುವ 152 ನೇ ಪ್ರಕರಣದ ಉಪಬಂಧಗಳ ಹಿನ್ನೆಲೆಯಲ್ಲಿ ಅವರಿಗೆ ತಿರುಗುಬಾಣವಾಗುವುದು. ಆದ್ದರಿಂದ, ವಿರೋಧಕ್ಕಾಗಿ ಮಾಡಿದ ಕ್ಲೇಮು ಅಧಿನಿಯಮದ 3 ಉಪಬಂಧಗಳಿಗನುಗುಣವಾಗಿ ಕಾನೂನುಬಾಹಿರವಾಗುವುದು.

38. ಸಂಕ್ಷಿಪ್ತವಾಗಿ, ಹೇಳುವುದಾದರೆ, 74 (ಎ) ನಿಯಮದ ಅಡಿಯಲ್ಲಿ ನಾಮನಿರ್ದೇಶಿತ ನಿರ್ದೇಶಕನ ನೇಮಕಾತಿಯು, ಆದೇಶವನ್ನು ಹೊರಡಿಸಿದ ನಂತರ ಖಚಿತಗೊಳ್ಳುವುದಿಲ್ಲವಾದರೂ, ಸಂಬಂಧಪಟ್ಟ ಮಂಡಳಿಯು ಗೊತ್ತುವಳಿಯನ್ನು ಅಂಗೀಕರಿಸಿದ ನಂತರ ಮಾತ್ರವೇ ಪರಿಣಾಮಕಾರಿಯಾಗುತ್ತದೆ. ಹಾಗಿದ್ದರೆ, ಆಗ ಸರ್ಕಾರದ ಆದೇಶವು ಶಿಫಾರಸ್ಸಿಗೆ ಮಾತ್ರ ಸಮನಾಗಿರುತ್ತದೆ ಹಾಗೂ 74 ನೇ ನಿಯಮದ ಉಪಬಂಧಗಳ ಹಿನ್ನೆಲೆಯಲ್ಲಿ, ಅದನ್ನು ಬಂಧನಕಾರಿ ಶಿಫಾರಸ್ಸು ಎಂದು ಅರ್ಥೈಸಬೇಕಾಗುತ್ತದೆ ಮತ್ತು ಮಂಡಳಿಯು ಅದನ್ನು ಅನುಷ್ಠಾನಗೊಳಿಸಲು ಬದ್ಧವಾಗಿರುತ್ತದೆಯಾದರೂ, ಅದನ್ನು ಕಲ್ಪನೆಯ ವ್ಯಾಪ್ತಿ ಮೂಲಕ ನಿರ್ದೇಶಕನಾಗಿ ನೇಮಕ ಮಾಡಿದ ಮಂಡಳಿಯ ಗೊತ್ತುವಳಿಯೆಂದು ಅರ್ಥೈಸಲಾಗುವುದಿಲ್ಲ. ವಿಷಯಕ್ಕೆ ಸಂಬಂಧಿಸಿದ ಈ ಹಿನ್ನೆಲೆಯಲ್ಲಿ, ದಿನಾಂಕ: 23.07.2019 ರಿಂದ ಜಾರಿಗೆ ಬರುವಂತೆ ಹುದ್ದೆ ವಹಿಸಿಕೊಂಡಿರುವ ಕ್ಲೇಮು ಮತ್ತು ದಿನಾಂಕ: 23.07.2019 ರಿಂದ 07.08.2019 ರ ನಡುವೆ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುವುದಾಗಿ ಮಾಡಿರುವ ಮೂರನೇ ಪ್ರತಿವಾದಿಯ ಕ್ಲೇಮು ಯಾವುದೇ ಪರಿಣಾಮ ಹೊಂದಿರುವುದಿಲ್ಲ ಮತ್ತು ಈ ವರ್ತನೆ/ವರ್ತನೆಗಳು ಕಾನೂನಿನ ಬಗ್ಗೆ ತಪ್ಪು ಕಲ್ಪನೆಯಾಗಿದೆ/ವೆ.

39. ಈಗ ಆದೇಶದ ಸಿಂಧುತ್ವದ ಸಂಗತಿಗೆ ಬರುವುದಾದರೆ, ಅದು ಈ ನ್ಯಾಯಾಲಯವನ್ನು ದೀರ್ಘ ಕಾಲ ತಡೆಹಿಡಿದಿಡಬೇಕಾದ ಅಗತ್ಯವಿಲ್ಲ. ಆದೇಶಗಳಿಗಾಗಿ ಮಾನ್ಯ ಮುಖ್ಯ ಮಂತ್ರಿಯವರಿಗೆ ಎರಡನೇ ಪ್ರತಿವಾದಿಯು ಕಳುಹಿಸಿದ ಪ್ರಸ್ತಾವನೆಗೆ ಸಂಬಂಧಿಸಿದ ಕಡತವನ್ನು ಈ ನ್ಯಾಯಾಲಯವು ಪರಿಶೀಲಿಸಿದೆ. ಪ್ರಸ್ತಾವನೆಯು ಯಾವುದೇ ಕಾರಗಣಗಳಿಂದ ಸಮರ್ಥಿತವಾಗಿಲ್ಲ. ಮೂರನೇ ಪ್ರತಿವಾದಿಯ ನೇಮಕಾತಿಗಾಗಿನ ಪ್ರಸ್ತಾವನೆಯು 27 ನೇ ಕಂಡಿಕೆಯಲ್ಲಿದೆ. ಆದರೆ, 4 ನೇ ಪ್ರತಿವಾದಿ ಕಂಪನಿಯ ಮಂಡಳಿಯ ನಿರ್ದೇಶಕತ್ವದ ಹುದ್ದೆಯಿಂದ ಅರ್ಜಿದಾರರನ್ನು ತೆಗೆದುಹಾಕಿರುವುದಕ್ಕೆ ಸಂಬಂಧಿಸಿದ ಸಂವಾದಿ ಪ್ರಸ್ತಾವನೆ ಇಲ್ಲ. ಇದಕ್ಕೆ ತದ್ವಿರುದ್ಧವಾಗಿ, 26 ನೇ ಕಂಡಿಕೆಯಲ್ಲಿರುವ ಕಡತ ಟಿಪ್ಪಣಿಯು, ಸ್ವತಃ ಕರ್ನಾಟಕ ವಿದ್ಯುಚ್ಛಕ್ತಿ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಾಗಿ ಅರ್ಜಿದಾರರ ನೇಮಕಾತಿ-ಮಾಡುವುದಕ್ಕೆ ಸಂಬಂಧಿಸಿದ ಪ್ರಸ್ತಾವನೆಯನ್ನು ಬಹಿರಂಗಪಡಿಸುತ್ತದೆ. 33 ನೇ ಕಂಡಿಕೆಯಲ್ಲಿ, ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನಂತೆ ಮಾತ್ರವೇ ತಮ್ಮ ಅಭಿಪ್ರಾಯ ದಾಖಲಿಸಿರುತ್ತಾರೆ:

" ಕಂಡಿಕೆ 26 ಮತ್ತು 27 ನ್ನು ಅನುಮೋದಿಸಿದೆ. "

ಅದರ ಅರ್ಥವೆಂದರೆ, ಮುಖ್ಯ ಮಂತ್ರಿಗಳು 26 ನೇ ಮತ್ತು 27 ನೇ ಕಂಡಿಕೆಗಳಲ್ಲಿರುವ ಪ್ರಸ್ತಾವಗಳನ್ನು ಮಾತ್ರ ಅನುಮೋದಿಸಿದ್ದಾರೆ. ಯಾವುದೇ ಕಾರಣಗಳನ್ನು ನೀಡಿರುವುದಿಲ್ಲ. ಇಷ್ಟಪರಂತ ತತ್ವದ ವ್ಯಾಪ್ತಿಯನ್ನು ಚರ್ವಿತಚರ್ವಣವಾಗಿ ಚರ್ಚಿಸಲಾಗಿದೆ ಮತ್ತು ಆ ಸಂಬಂಧದಲ್ಲಿನ ನಿಯಮವು ಇತ್ಯರ್ಥವಾದುದಾಗಿದೆ ಹಾಗೂ ಇಷ್ಟಪರಂತ ತತ್ವದ ಸಿದ್ಧಾಂತದಲ್ಲಿ ಮೈಲುಗಲ್ಲಾಗಿರುವ ಬಿ.ಪಿ. ಸಿಂಘಾಲ್ ಮೊಕದ್ದಮೆಯಲ್ಲಿ ಅದನ್ನು ವಿಧಿಸಲಾಗಿದೆ. ವ್ಯಕ್ತಗೊಂಡ ನಿರ್ಣಯಗಳು ಮತ್ತು 34 ನೇ ಕಂಡಿಕೆಯಲ್ಲಿ ವಿಧಿಸಿದ ಕಾನೂನು ಪೂರ್ವನಿದರ್ಶನವಾಗಿದ್ದು, ಈ ನ್ಯಾಯಾಲಯಯಕ್ಕೆ ಬಂಧನಕಾರಿಯಾಗಿವೆ. ಧ್ಯಾನೇಶ್ವರ್-ವಿರುದ್ಧ-ಮಹಾರಾಷ್ಟ್ರ ರಾಜ್ಯ ಮೊಕದ್ದಮೆಯಲ್ಲಿ ಬಾಂಬೆ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು 10 ನೇ ಕಂಡಿಕೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಿದೆ:

" 10. ಹೀಗೆ, ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ನಿಯಮವೆಂದರೆ, ಇಚ್ಛಾನುಸಾರದ ಹಿಂತೆಗೆದುಕೊಳ್ಳುವಿಕೆಯು, ರಾಜ್ಯ ಸರ್ಕಾರದ ಇಚ್ಛಾನುಸಾರ ಅಥವಾ ಅಪೇಕ್ಷೆಗೆ ತಕ್ಕಂತ ಖಯಾಲಿ ಇರಲು ಸಾಧ್ಯವಿಲ್ಲ. ಸಿಂಧುವಾದ ಕಾರಣಗಳಿದ್ದಾಗ ಮಾತ್ರವೇ ಅದು ಸಾಧ್ಯವಾಗುತ್ತದೆ. ಇದಲ್ಲದೆ, ಇಚ್ಛಾನುಸಾರ ಹಿಂತೆಗೆದುಕೊಳ್ಳುವ ಅಧಿಕಾರವನ್ನು ಸಕಾರಣವಾಗಿ ಹಾಗೂ ಸಾರ್ವಜನಿಕ ಹಿತಕ್ಕಾಗಿ ಮಾತ್ರವೇ ಬಳಕೆ ಮಾಡಬಹುದಾಗಿದೆ. ಇಲ್ಲಿ ನಾವು ಗಮನಿಸಬೇಕಾದುದೆಂದರೆ, ರಿಟ್ ಅರ್ಜಿ ಸಂಖ್ಯೆ: 2016 ರ 326 ರಲ್ಲಿನ ಈ ನ್ಯಾಯಾಲಯದ ನಿರ್ಣಯವನ್ನು, ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯದ ಮುಂದೆ ಪ್ರಶ್ನಿಸಿದೆಯಾದರೂ, ಒಪ್ಪಿಕೊಂಡಿರುವಂತೆ ಸರ್ವೋಚ್ಚ ನ್ಯಾಯಾಲಯವು ತಾತ್ಕಾಲಿಕವಾದ ಯಾವುದೇ ಪರಿಹಾರವನ್ನು ನೀಡಿರುವುದಿಲ್ಲ. ”

40. ಕಡತವು ಯಾವುದೇ ಕಾರಣವನ್ನು, ಏನೇ ಆಗಲಿ ನಿರ್ದೇಶಕರನ್ನಾಗಿ ಮೂರನೇ ಪ್ರತಿವಾದಿಯ ನೇಮಕಾತಿಗೆ ಸಂಬಂಧಿಸಿದ ಯಾವುದೇ ಸಿಂಧುವಾದ ಕಾರಣವನ್ನು ಬಹಿರಂಗಪಡಿಸುವುದೇ ಇಲ್ಲ.

ಇದಲ್ಲದೆ, ಅರ್ಜಿದಾರರನ್ನು ತೆಗೆದುಹಾಕುವುದಕ್ಕೆ ಯಾವುದೇ ಸಿಂಧುವಾದ ಕಾರಣಗಳನ್ನು ಸಹ ಕಡತವು ಬಹಿರಂಗಪಡಿಸುವುದಿಲ್ಲ. ಸಿಂಧುವಾದ ಕಾರಣಗಳನ್ನು ಬಿಟ್ಟುಬಿಡೋಣ, 4 ನೇ ಪ್ರತಿವಾದಿ ಕಂಪನಿಯ ಮಂಡಳಿಯಲ್ಲಿನ ನಿರ್ದೇಶಕ ಸ್ಥಾನದಿಂದ ಅರ್ಜಿದಾರರನ್ನು ತೆಗೆದುಹಾ ದಕ್ಕೆ ಸಂಬಂಧಿಸಿದ ಪ್ರಸ್ತಾವನೆಯನ್ನು ಸಹ ಕಡತವು ಒಳಗೊಂಡಿರುವುದಿಲ್ಲ. ಪ್ರಾಧಿಕಾರದ ತೆಗೆದುಹಾಕುವಿಕೆಯ ಮತ್ತು ಅನುಮೋದಿಸುವ ಪ್ರಸ್ತಾವನೆ ಇಲ್ಲದಿರುವಲ್ಲಿ, ಅದರ ಮೂರನೇ ಪ್ರತಿವಾದಿಯ ನೇಮಕಾತಿಯು ಯಾವುದೇ ರೀತಿಯಲ್ಲೂ, 4 ನೇ ಪ್ರತಿವಾದಿ ಕಂಪನಿಯ ಮಂಡಳಿಯ ನಿರ್ದೇಶಕರಾಗಿ ಮುಂದುವರಿಯುವ ಅರ್ಜಿದಾರರ ಹಕ್ಕನ್ನು ಮೊಟಕುಗೊಳಿಸುವುದಿಲ್ಲ.

41. ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ, 4 ನೇ ಪ್ರತಿವಾದಿ ಕಂಪನಿಯ ಮಂಡಳಿಯಲ್ಲಿ ನಿರ್ದೇಶಕರಾಗಿ ಮೂರನೇ ಪ್ರತಿವಾದಿಯನ್ನು ನಾಮನಿರ್ದೇಶಿಸಿ ಮಾನ್ಯ ಮುಖ್ಯ ಮಂತ್ರಿಗಳು ಹೊರಡಿಸಿದ ಆದೇಶವು ಯಾವುದೇ ಸಿಂಧುವಾದ ಕಾರಣಗಳಿಂದ ಸಮರ್ಥಿತವಾಗಿಲ್ಲದ ಕಾರಣದಿಂದ, ಅದನ್ನು ಕಾನೂನುಬಾಹಿರವೆಂದು ನಿರ್ಣಯಿಸಬೇಕಾಗುತ್ತದೆ.

42. ತದನುಸಾರವಾಗಿ, ರಿಟ್ ಅರ್ಜಿಯನ್ನು ಪುರಸ್ಕರಿಸಲಾಗಿದೆ. ದಿನಾಂಕ: 22.07.2019 ರ ಪ್ರಶ್ನಿತ ಆದೇಶವು ರದ್ದುಗೊಳ್ಳುತ್ತದೆ.

43. ವೆಚ್ಚಕ್ಕೆ ಸಂಬಂಧಿಸಿದಂತೆ ಯಾವುದೇ ಆದೇಶವಿಲ್ಲ. ಎರಡನೇ ಪ್ರತಿವಾದಿ ಪರ ನ್ಯಾಯವಾದಿಗೆ ನ್ಯಾಯಾಲಯದ ಅಭಿರಕ್ಷೆಯಲ್ಲಿರುವ ಕಡತವನ್ನು ಹಿಂತಿರುಗಿಸಲು ರಿಜಿಸ್ಟ್ರಿಗೆ ನಿರ್ದೇಶಿಸಲಾಗಿದೆ.

44. ಆದೇಶದ ಉದ್ಘೋಷಣೆಯ ನಂತರ, 3 ನೇ ಪ್ರತಿವಾದಿ ಪರ ಹಾಜರಾದ ಹಿರಿಯ ನ್ಯಾಯವಾದಿ ಶ್ರೀ ವಿ. ಲಕ್ಷ್ಮೀನಾರಾಯಣ ಅವರು, ಅನುಷ್ಠಾನವನ್ನು ಪುನಃ ಮಾಡಲು ಸರ್ಕಾರಕ್ಕೆ ಸ್ವಾತಂತ್ರ್ಯ ನೀಡಬೇಕೆಂದು ನಿವೇದಿಸಿಕೊಂಡಿದ್ದಾರೆ. ಕಾನೂನಿನಗನುಸಾರವಾಗಿ ಕಾರ್ಯನಿರ್ವಹಿಸಲು ಈ ಆದೇಶವು ಸರ್ಕಾರವನ್ನು ನಿರ್ಬಂಧಿಸುವುದಿಲ್ಲ. ವಾಸ್ತವವಾಗಿ, ರಿಟ್ ಅರ್ಜಿಯನ್ನು ಅನುಮತಿಸಲಾಗಿರುವ ಪೂರ್ವೋಕ್ತವು, ಶಾಸನ ಮತ್ತು ಅನುಚ್ಛೇದಗಳ ಮೇರೆಗೆ ಗೊತ್ತುಪಡಿಸಿದ ಕಾರವಿಧಾನವನ್ನು ಅನುಸರಿಸದಿರುವ ಕಾರಣ ಸರ್ಕಾರದ ಕ್ರಮವನ್ನು ನಿರರ್ಥಕಗೊಳಿಸಿದೆ ಎಂಬುದಾಗಿದೆ. ಆದ್ದರಿಂದ, ಯಾವುದೇ ವಿನಾಯಿತಿಯನ್ನು ಕಾಯ್ದಿಡಲಾಗುವುದಿಲ್ಲ ಮತ್ತು ಮಾನ್ಯ ಹಿರಿಯ ನ್ಯಾಯವಾದಿಗಳ ವಾದವು ಅತಿಶಯದಿಂದ ಕೂಡಿದೆ.

45. ಅರ್ಜಿ ಸಂಖ್ಯೆ: ಐಎ-2/2019 ನ್ನು ಸಹ ಆದೇಶದ ಅನುಷ್ಠಾನದ ತಡೆ ಕೋರಿ ಸಲ್ಲಿಸಲಾಗಿದೆ. ಪದ್ಯಾಲೋಚಿಸಲಾದಂಥ ಕಾರವಿಧಾನಗಳನ್ನು ಅನುಸರಿಸಿರುವುದಿಲ್ಲವೆಂದು ಈ ನ್ಯಾಯಾಲಯವು ಸವಿವರವಾದ ಆದೇಶದ ಮೂಲಕ ನಿರ್ಣಯಿಸಿದೆ. ವಿಷಯದ ಈ ಹಿನ್ನೆಲೆಯಲ್ಲಿ, ತೀರ್ಪನ್ನು ತಡೆಹಿಡಿಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ತದನುಸಾರವಾಗಿ ಅರ್ಜಿಯನ್ನು ತಳ್ಳಿಹಾಕಲಾಗಿದೆ.